…ಬಾಗಿಲು ಗೆಲಿ

(ನಾಟ್ಯ ಸಂಕಲನ)

ಲೇ: ಶೇಷಗಿರಿರಾವ್ (ವ್ಯ.ಸಂ)

1956


ಊರಬಸವಿ
ಮೈ.ಸು.ರೇ

ಊರಬಸವಿ

—ನವ್ಯ ಕಾದಂಬರಿ—

ಲೇಖಕ:-

ನ್ಯಾ. ಸು. ಶೇಷಗಿರಿರಾವ್

-:ಪ್ರಕಾಶಕರು:-

ರಾಜಕಮಲ್ ಪ್ರಕಾಶನ

...ರ್ಕ್. ಬಳೇಪೇಟೆ, ಬೆಂಗಳೂರು-೨.

ಪ್ರಥಮ ಮುದ್ರಣ

೧೯೫೬

ಬೆಲೆ ಆರು ಆಣೆಗಳು

ಮುದ್ರಕರು

ಭಾವನಾ ಪ್ರೆಸ್

ಗೌಡನ ಪೇಟೆ, ಬೆಂಗಳೂರು-೨

ಸತೀಕಲ್ಲು

೧

ಆ ಎರಡು ಸತೀಕಲ್ಲುಗಳನ್ನು ಬಿಟ್ಟರೆ, ಆ ಹಳ್ಳಿಯಲ್ಲಿ ಮತ್ತೇನೂ ವಿಶೇಷವಿಲ್ಲ. ಆ ಎರಡು ಸತೀಕಲ್ಲುಗಳಿರುವುದರಿಂದಲೇ ಆ ಹಳ್ಳಿಗೆ ಮಾನ್ಯತೆ.

ಆ ಬಸವಿಹಳ್ಳಿ ಅರವತ್ತು ಮನೆಗಳ ಹಳ್ಳಿ. ಆ ಅರವತ್ತು ಮನೆಗಳವರೂ ನಾಯಕ ಜನಾಂಗಕ್ಕೆ ಸೇರಿದವರು. ಬಸವಿಹಳ್ಳಿ ಒಂದು ಕಾಲದಲ್ಲಿ ರಾಜಕೀಯದ ಆಡಂಬೋಲವಾಗಿತ್ತು. ನಿರಂಕುಶ ಪಾಳೆಯಗಾರರ ಪ್ರಾಮುಖ್ಯ ಸ್ಥಾನವಾಗಿತ್ತು.

ಇಂದು ಆ ಹಳ್ಳಿಯಲ್ಲಿ ರಾಜಕೀಯ ಗೊಂದಲವಿಲ್ಲ. ಪಾಳೆಯಗಾರ ವಂಶಸ್ತರಾದ ಆ ನಾಯಕ ಜನಾಂಗದವರು ಇಂದು ಸಂಪೂರ್ಣ ಬೇಸಾಯಗಾರರಾಗಿ ಮಾರ್ಪಟ್ಟಿದ್ದಾರೆ. ಬಸವಿಹಳ್ಳಿ ಚಿಕ್ಕದಾದರೂ ಅಲ್ಲಿ ಇಬ್ಬಣವಿಲ್ಲ.

ಹಳ್ಳಿಯ ಹೊರಗೆ ಇರುವ ಗಂಗಾಧರೇಶ್ವರನ ಶಿಥಿಲ ದೇವಾಲಯದ ಪಕ್ಕದಲ್ಲಿರುವ ಎರಡು ಸತೀಕಲ್ಲುಗಳು ಆ ಹಳ್ಳಿಯಲ್ಲಿನ ಎರಡು ಗತಕಾಲದ ಚಾರಿತ್ರಿಕ ಜೀವಂತ ಸಾಕ್ಷ್ಯಗಳಾಗಿ ಉಳಿದಿವೆ.

ಆ ಸತೀಕಲ್ಲುಗಳು ವೈಭವವಾಗಿ ಮೆರೆಯುತ್ತಿಲ್ಲ. ಅನಾಥವಾಗಿ ನಿಂತಿವೆ. ಬಿಸಿಲಿನಲ್ಲಿ ಒಣಗುತ್ತವೆ; ಮಳೆಯಲ್ಲಿ ನೆನೆಯುತ್ತವೆ; ಬೆಳುದಿಂಗಳು ಬಿದ್ದಾಗ ಅದರಲ್ಲಿ ಮಿಾಯುತ್ತವೆ.

ಬಸವಿಹಳ್ಳಿಯವರಿಗೆ ಆ ಸತೀಕಲ್ಲಿನ ಕಥೆ, ಅದರ ಪ್ರಾಶಸ್ತ್ಯಗಳು ತಿಳಿದಿದೆ. ಆದರೂ ಅವರುಗಳಿಗೆ ಆ ಕಲ್ಲಿನ ಬಗೆಗೆ ಅನಾದರ. ಆ ಕಲ್ಲಿನ ಮುಂದೆ ದಿನಕ್ಕೆ ಎಷ್ಟು ಸಾರಿ ತಿರುಗಾಡಿದರೂ, ಅದನ್ನು ಕಣ್ಣೆತ್ತಿ ಸಹ ನೋಡುವುದಿಲ್ಲ. ಅವರ ಭಾಗಕ್ಕೆ ಸತೀಕಲ್ಲುಗಳು ಇದ್ದೂ ಇಲ್ಲದಂತಾಗಿವೆ.

ಆ ಸತೀಕಲ್ಲಿಗೆ ಗೌರವದಾನ ನೀಡುವಂತಹ ಯಾವ ಕಾರ್ಯವನ್ನೂ ಆ ಹಳ್ಳಿಗರು ಮಾಡಿಲ್ಲ. ಕಲ್ಲಿಗೆ ಒಂದು ಮಂಟಪವನ್ನಾಗಲೀ, ಅಥವ ಚಪ್ಪರವನ್ನಾಗಲಿ ಅವರು ಕಟ್ಟಿಸಿಲ್ಲ. ಕಟ್ಟಿಸಬೇಕೆಂಬ ಮನಸ್ಸೂ ಕೂಡ ಅವರಲ್ಲಿ

ಮೂಡಿರುವಂತಿಲ್ಲ.

ಆ ಸತೀಕಲ್ಲುಗಳ ನಿಲುವು ಕೂಡ ಆಕರ್ಷಕವಾಗಿಲ್ಲ. ಮಹತ್ತರ ಚಾರಿತ್ರಿಕ ಪ್ರಾಶಸ್ತ್ಯವುಳ್ಳ ಆ ಕಲ್ಲುಗಳು ನೆಲದಿಂದ ಕೇವಲ ಮೂರಡಿ ಎತ್ತರವಾಗಿದೆ. ಆ ಕಲ್ಲಿನ ಅಗಲ ಒಂದು ಅಡಿಯಿದೆ. ಅಷ್ಟೆ. ಕಲ್ಲಿನ ಮೇಲೆ ಒರಟಾಗಿ ಕೆತ್ತಿರುವ ಒಂದು ಚಿತ್ರವೂ ಇದೆ.

ಮೊದಲನೆಯ ಸತೀಕಲ್ಲಿನಮೇಲಿರುವ ಚಿತ್ರ ಹೀಗಿದೆ–

........ಒಂದು ಹರಯದ ಹೆಣ್ಣು, ಸಿಪಾಯಿಯೊಬ್ಬನ ಕೈಹಿಡಿದುಕೊಂಡು ನಗುನಗುತ್ತಾ ಹೆಜ್ಜೆಯಿಟ್ಟುಕೊಂಡು ಸಾಗುತ್ತಿದ್ದಾಳೆ........

—ಈ ಚಿತ್ರವಿರುವ ಕಲ್ಲನ್ನು ಆ ಹಳ್ಳಿಯವರು, 'ಮಹಾದೇವಿ ಸತೀಕಲ್ಲು' ಎಂದು ಕರೆಯುತ್ತಾರೆ.

'ಮಹಾದೇವಿ ಸತೀಕಲ್ಲಿನ' ಎಡಭಾಗಕ್ಕೆ ಸುಮಾರು ಎರಡುಗಜ ದೂರದಲ್ಲಿ ಇನ್ನೊಂದು ಸತೀಕಲ್ಲಿದೆ. ಈ ಕಲ್ಲಿನ ಮೇಲಣ ಭಾಗದ ಚಿತ್ರ ಈ ರೀತಿ ಇದೆ—

........ಒಬ್ಬ ಸರ್ವಾಂಗ ಸುಂದರನಾದ ಸರದಾರ, ಒಬ್ಬ ಯುವತಿಯತ್ತ ತನ್ನ ಕೈ ಚಾಚಿ, ಕರೆಯುತ್ತಿದ್ದಾನೆ;

ಆಕೆ 'ನಾನು ಬರಲೊಲ್ಲೆ' ಎಂಬಂತೆ ನಿರಾಕಾರದ ಅಸಹ್ಯ ಮುಖಮುದ್ರೆಯನ್ನು ಹೊತ್ತಿದ್ದಾಳೆ........

—ಈ ಕಲ್ಲನ್ನು ಆ ಹಳ್ಳಿಯವರು, "ಊರಬಸವಿ ಕಲ್ಲು" ಎಂದು ಗುರುತಿಸುತ್ತಾರೆ.

ಈ ಸತೀಕಲ್ಲುಗಳ ಗತವೈಭವವೇನೇ ಆಗಿರಲಿ. ಇಂದು ಅವಕ್ಕೆ ಆ ಹಳ್ಳಿಯಲ್ಲಿ ಮಾನ್ಯತೆಯೇ ಇಲ್ಲ. ಈ ಕಲ್ಲುಗಳ ಸುತ್ತಮುತ್ತಿಲ್ಲಾ ಹಳ್ಳಿಗರು ಮಲಮೂತ್ರಗಳನ್ನು ವಿಸರ್ಜಿಸುತ್ತಾರೆ. ಹಳ್ಳಿಯ ನಾಯಿಗಳೂ ಕೂಡ ಬೇಕಾಗಿಯೋ, ಅಥವ ಅಭ್ಯಾಸದಂತೆಯೋ ಈ ಕಲ್ಲುಗಳ ಮೇಲೆಯೇ ತಮ್ಮ ಜಲಬಾಧೆಯನ್ನು ತೀರಿಸಿಕೊಳ್ಳುತ್ತವೆ. ಈ ಕಲ್ಲಿನ ಬಳಿಯೇ ಕತ್ತೆಗಳೂ ಸಹ ವಿಶ್ರಾಂತಿ ಪಡೆಯುತ್ತವೆ.

'ಊರಬಸವಿ ಕಲ್ಲಿ'ನ ಪಕ್ಕದಲ್ಲಿಯೇ ಗಂಗಾಧರೇಶ್ವರನ ಚಿಕ್ಕ ಗುಡಿಯಿದೆ. ದೇಗುಲದ ಕಿರು ಜಗುಲಿಯ ಮೇಲೆ ದಾರಿಹೋಕರು, ಮಧ್ಯಾಹ್ನದ ವೇಳೆ ಮಲಗಿಕೊಳ್ಳುತ್ತಾರೆ. ಅಥವ ಮಾತನಾಡುತ್ತ ಕುಳಿತುಕೊಳ್ಳುತ್ತಾರೆ. ಮಾತಿನ ಭರಾಟೆಯಲ್ಲಿ ಬಾಯಿನ ವೀಳ್ಯದ ರಸ

ವನ್ನು ಪಕ್ಕಕ್ಕೆ ತಿರುಗಿ ಉಗಿಯುತ್ತಾರೆ. ಆ ತಂಬುಲ ಬಂದು ಈ ಸತೀಕಲ್ಲುಗಳಿಗೆ ಅಭಿಷೇಕ ಮಾಡುತ್ತದೆ.

ಇಂತಹ ಸ್ಥಾನಮಾನಗಳು ಆ ಕಲ್ಲುಗಳಿಗೆ ದೊರಕಿದ್ದರೂ, ಆ ಸತೀಕಲ್ಲುಗಳ ಕಥೆ ಆ ಬಸವಿಹಳ್ಳಿಯವರಿಗೆಲ್ಲ ಹೆಚ್ಚುಕಮ್ಮಿ ತಿಳಿದೇ ಇದೆ. 'ಊರಬಸವಿ ಕಲ್ಲಿ'ನ ಕಥೆಯ ಸಂಬಂಧದಿಂದಲೇ ತಮ್ಮ ಹಳ್ಳಿಗೆ 'ಬಸವಿಹಳ್ಳಿ' ಎಂದು ಹೆಸರು ಬಂದಿತೆಂದೂ ಅವರು ಹೇಳುತ್ತಾರೆ.

—ಆದರೂ, ಏಕೋ, ಏನೋ ಆ ಹಳ್ಳಿಗರಿಗೆ ಆ ಕಲ್ಲುಗಳು ಬೇಡದ ವಸ್ತುವಾಗಿದೆ!

ಆ ಎರಡು ಕಲ್ಲುಗಳ ಹಿನ್ನೆಲೆಯಲ್ಲಿ ಎರಡು ಹೆಣ್ಣು ಮಕ್ಕಳ ಹೃದಯಸ್ಪರ್ಶಿಯಾದ ಕಥೆ ಅಡಗಿದೆ. ಪ್ರೂಣ್ದ ಮಾನವ್ಯವನ್ನು ಪಡೆದಿರುವ ಯಾವ ಮನುಷ್ಯನನ್ನೇ ಆಗಲಿ, ಆ ಕಲ್ಲಿನ ಕಥೆ, ಪರಿಣಾಮ ಮಾಡಿಸುವುದರಲ್ಲಿ ಸಂದೇಹವಿಲ್ಲ. ಕಥೆ, ಕೇವಲ ಕಥೆಯಾಗಿಲ್ಲ. ಗತ ಕಾಲದಲ್ಲಿನ ಜೀವಂತ ಕಥೆಯದು.

ಬಸವಿಹಳ್ಳಿಯ, ನೂರುಎರಡು ವಯಸ್ಸಿನ ಹಿರಿಯ ಸಿದ್ದನಾಯಕ ಯಾರಿಗೆ ಬೇಕಾದರೂ ಆ ಸತೀಕಲ್ಲುಗಳ

ಕಥೆಯನ್ನು ಹೇಳುತ್ತಾನೆ. ಅವನಿಗೆ ಆ ಕಲ್ಲುಗಳ ಬಗೆಗೆ ಅಪಾರ ಗೌರವ, ಪೂಜ್ಯತೆ ಇದೆ. ಆದರೆ ಆತ ಆ ಕಲ್ಲುಗಳಿಗೊಂದು ಗೌರವಸ್ಥಾನವನ್ನು ಕಲ್ಪಿಸಿಕೊಡಲು ಅಸಮರ್ಥನಾಗಿದ್ದಾನೆ. ಅದಕ್ಕೆ ಆತ ಆ ಕಲ್ಲುಗಳ ಮೇಲೆ ತನಗಿರುವ ಪೂಜ್ಯಭಾವವನ್ನು, ಅದರ ಕಥೆಯನ್ನು ಕೇಳಿದವರಿಗೆ ತಿಳಿಸುತ್ತಾನೆ. ಅದರಿಂದಲೇ ತನ್ನ ಗೌರವವನ್ನು ತಾನು ಆ ಸತೀಕಲ್ಲುಗಳಿಗೆ ತೋರಿದಂತೆ ಎಂದು ತಿಳಿದುಕೊಳ್ಳುತ್ತಾನೆ.

—ಇದೇ, ಆ ಕಲ್ಲುಗಳ ಬಗೆಗೆ ಸಿದ್ದನಾಯಕ ನೀಡುವ ತೋರುವ, ಮಾನ್ಯತೆ, ಭಕ್ತಿ.

ಸಿದ್ದನಾಯಕ 'ಮಹಾದೇವಿ ಸತೀಕಲ್ಲಿ'ನ ಕಥೆಯನ್ನು ಹೀಗೆ ಹೇಳುತ್ತಾನೆ.......

"ಮಹಾದೇವಿ ಸತೀಕಲ್ಲು"

—"ಕೂಗುತಿವೆ ಕಲ್ಲುಗಳು, ಕಿವಿವೆತ್ತು ಕಿವುಡರಿರ
ಕೇಳಿ ಆ ಸೊಲ್ಲು."

ನಮ್ಮ ಪ್ರಕಾಶನದ ಹಿಂದಿನ ಕೈ ಹೊತ್ತಿಗೆಗಳು.

ಎನ್. ನರಸಿಂಹಯ್ಯನವರಿಂದ ವಿರಚಿತವಾದ
ಪತ್ತೇದಾರಿ ಕಾದಂಬರಿಗಳು

ವ್ಯಾಘ್ರಮುಖ

ಫೋರ್ಜರಿ ಪತ್ರ

ಮೃತ್ಯುಮಣಿ

ಪ್ರತಿ ಕಾದಂಬರಿಯ ಬೆಲೆ ಹತ್ತು ಅಣೆ.

-: ಪ್ರಕಾಶಕರು :-

ರಾಜಕಮಲ್ ಪ್ರಕಾಶನ

೧೦೯. ಬಳೇಪೇಟೆ, ಬೆಂಗಳೂರು-೨.

೧

ಶತಮಾನಗಳ ಹಿಂದಿನ ಕಥೆಯಿದು. ರಾಜ್ಯ, ಪಾಳೆಯ ಾರರುಗಳಲ್ಲಿ ಹರಿದು ಹಂಚಿಹೋಗಿದ್ದ ಕಾಲವದು. ್ರತಿಯೊಬ್ಬ ಹುಲು ಪಾಳೆಯಗಾರನೂ ನಿರಂಕುಶ ್ರಭುವಾಗಿ, ತನಗೆ ತೋರಿದಂತೆ ತನ್ನ ಪಾಳೆಯಪಟ್ಟನ್ನು ಳುತ್ತಿದ್ದ ವೇಳೆಯದು. ಯಾವ ಹೊತ್ತಿಗೆ ಏನು ನಾಹುತ ಬೆನ್ನುಹತ್ತುವುದೋ ಎಂದು ಪಾಳೆಪಟ್ಟಿನ ನತೆ ಕಳವಳದಿಂದ ಕೂಡಿದ್ದ ವಾತಾವರಣಗಳ ದಿನಗ ದು. ದಿನಕ್ಕೊಂದು ಜಗಳ, ಘಳಿಗೆಗೊಂದು ಕಗ್ಗೊಲೆ, ಾರಕ್ಕೊಂದು ಯುದ್ಧ, ತಿಂಗಳಿಗೊಮ್ಮೆ ಪಾಳೆಯಗಾ ನ ಸ್ಥಾನಪಲ್ಲಟವಾಗುತ್ತಿದ್ದ ರುದ್ರಭೀಕರಗಳಿಂದ ತುಂಬಿ ತುಳುಕಾಡುತ್ತಿದ್ದ ಸಂಕಟದ ಸಮಯದ್ದು ಈ ಕಲ್ಲಿನ ಕಥೆಗಳು.

ಆಗ ಈ ಬಸವಿ ಹಳ್ಳಿಗೆ 'ನಾಯಕಪುರ'ವೆಂದು ಹೆಸ ರಿತ್ತು. ಹಳ್ಳಿ ಇಷ್ಟು ಚಿಕ್ಕದಾಗಿರಲಿಲ್ಲ. ಈ ಪ್ರಾಂತ್ಯ

ವನ್ನು ಆಳುತ್ತಿದ್ದ ರುದ್ರನಾಯಕನ ಆಡಳಿತ ಕೇಂದ್ರ ಹಾಗೂ ನಾಯಕನ ವಾಸಸ್ಥಾನವಾಗಿತ್ತು ಈ ಹಳ್ಳಿ.

ರುದ್ರನಾಯಕ ಎಷ್ಟು ರಸಿಕನಾಗಿದ್ದನೋ, ಅಷ್ಟೆ ಕಲಹಪ್ರಿಯನಾತ. ತನ್ನ ಸ್ವಶಕ್ತಿಯಿಂದಲೇ ಹಿಂದಿನ ಪಾಳೆಯಗಾರರನ್ನು ಸಂಹರಿಸಿ, ಪಾಳೆಯಪಟ್ಟನ್ನು ತನ್ನ ಆಳ್ವಿಕೆಗೆ ತೆಗೆದುಕೊಂಡಿದ್ದ. ಆಜಾನುಬಾಹುವೆನಿಸಿದ್ದ ರುದ್ರನಾಯಕನ ಕಾಮದಾಹ ಆವನ ಪಾಳೆಯಪಟ್ಟಿನ ಲ್ಲೆಲ್ಲಾ ಭೀತಿಯನ್ನುಂಟುಮಾಡಿತ್ತು. ಯಾವ ಹರ ಯದ ಸುಂದರ ಹೆಣ್ಣು ಅವನ ಕಣ್ಣಿಗೆ ಬಿದ್ದರೂ ತೀರಿತು. ಆ ಹೆಣ್ಣನ್ನು ಆತ ಅನುಭವಿಸದೆ ಬಿಡುತ್ತಿರಲಿಲ್ಲ.

ರುದ್ರನಾಯಕನ ಈ ಭೀತಿಯಿಂದ ಸಾಮಾನ್ಯವಾಗಿ ಯಾವ ಹರಯದ ಹೆಂಗಸರೂ ಮನೆಯ ತಲೆಬಾಗಿಲನ್ನು ದಾಟಿ ಹೊರಗೆ ಕಾಲಿಡಲು ಹೆದರುತ್ತಿದ್ದರು. ಎಂತಲೇ ಆ ಪ್ರಾಂತ್ಯದಲ್ಲಿ ಹಿಂದುಗಳ ಮನೆಯಲ್ಲಿಯೂ ಜನಾನಾ ಸಂಪ್ರದಾಯ ತಲೆದೋರಿತ್ತು.

ನಾಯಕ ವಾಸಮಾಡುತ್ತಿದ್ದ ವಿಶಾಲವಾದ ಭವನ ದಲ್ಲಿ, ನಾಯಕನ ಕಾಮದಾಹವನ್ನು ತೃಪ್ತಿಪಡಿಸಲಿ

ಲಿಕ್ಕೊಂದೇ ಒಂದು ಪ್ರತ್ಯೇಕ ವಿಲಾಸಿನಿಯರ ಶಾಖೆಯಿತ್ತು. ಅದಕ್ಕೆ ನಾಯಕ 'ವಿಲಾಸಮಂದಿರ'ವೆಂದು ಕರೆಯುತ್ತಿದ್ದ. ನಾಯಕ ವಿಲಾಸ ಮಂದಿರದಲ್ಲಿರುವಾಗ ಎಂತಹ ಜರೂರು ರಾಜಕಾರ್ಯಗಳಿದ್ದರೂ, ಆತನನ್ನು ಕರೆದು ಮಾತನಾಡಿಸುವ ಸಾಮರ್ಥ್ಯದ ದಿಟ್ಟತನ ಅವನ ಪರಿವಾರದಲ್ಲಿ ಯಾರಿಗೂ ಇರಲಿಲ್ಲ.

ನಾಯಕನ 'ವಿಲಾಸಮಂದಿರ'ದಲ್ಲಿದ್ದ ಹನ್ನೆರಡು ಸ್ತ್ರೀಯರೂ ಪೂರ್ಣ ವಿಲಾಸಿನಿಯರಲ್ಲ; ವೇಶ್ಯಾಮನೆತನದವರಲ್ಲ. ಅವರು ನಾಯಕನ ಸಹವಾಸವನ್ನು ಬಯಸದೆ ಮನೆಯಲ್ಲೇ ಸಂಸಾರ ಮಾಡಿಕೊಂಡಿದ್ದವರು. ಅವರ ಸೌಂದರ್ಯ ಅವರಿಗೇ ಶತ್ರುವಾಗಿ ನಿಂತು, ಅವರುಗಳನ್ನು ನಾಯಕನ ಕಾಮುನರಗಿಣಿಗಳಾಗಿ ಮಾಡಿತು. ನಾಯಕನ ಕಾಮುಕ ದೃಷ್ಟಿ ಅವರುಗಳ ಮೇಲೆ ಬಿದ್ದು, ಆ ಸ್ತ್ರೀಯರು ವಿಧಿಯಿಲ್ಲದೆ ನಾಯಕನ 'ವಿಲಾಸಮಂದಿರ'ವನ್ನು ಸೇರಬೇಕಾಯಿತು.

ನಾಯಕನ ವಿಲಾಸಮಂದಿರ ವೈಭವಪೂರ್ಣವಾದುದು. ಇಪ್ಪತ್ತೈದು ಪ್ರತ್ಯೇಕ ಕೋಣೆಗಳಿಂದ ಕೂಡಿದುದು.

ಒಂದೊಂದು ಕೋಣೆಯಲ್ಲಿಯೂ ಒಬ್ಬೊಬ್ಬ ವಿಲಾಸಿನಿ. ಆದರೆ ನಾಯಕನ ವಿಲಾಸಮಂದಿರದಲ್ಲಿದ್ದ ಇಪ್ಪತ್ತೈದು ಕೋಣೆಗಳಲ್ಲಿ ಹನ್ನೆರಡು ಕೋಣೆಗಳು ಮಾತ್ರ ತುಂ ಬಿತ್ತು. ಮಿಕ್ಕವು ಬರಿದಾಗಿತ್ತು. ಅವನ್ನು ತುಂಬು ವುದರಲ್ಲಿದ್ದ.

ವಿಲಾಸಮಂದಿರದಲ್ಲಿದ್ದ ಯಾವ ವನಿತೆಯೂ ಆನಂದ ವಾಗಿರಲಿಲ್ಲ. ಅವರೆಲ್ಲಾ ಕೇವಲ ಯಾಂತ್ರಿಕ ಜೀವನ ವನ್ನು ನಡೆಸುತ್ತಿದ್ದರು. ಅವರಲ್ಲಿ ಯಾರೂ ತಾವಾ ಗಿಯೇ ನಾಯಕನನ್ನು ಒಲಿದು ಬಂದವರಲ್ಲ ಅವ ಪಾಲಿಗೆ ವಿಲಾಸಮಂದಿರ ಸೆರೆಮನೆಯಾಗಿತ್ತು. ಆದರ ಯಾರೂ ತಮ್ಮ ಗೋಳನ್ನು ನಾಯಕನ ಮುಂದೆ ತೋರಿ ಕೊಳ್ಳಲಾರರು. ತೋಡಿಕೊಂಡರೂ ಪ್ರಯೋಜನವಿ ವೆಂದು ಅವರಿಗೇ ಚೆನ್ನಾಗಿ ತಿಳಿದಿತ್ತು.

ವಿಲಾಸಮಂದಿರದ ಸ್ತ್ರೀಯರಿಗೆ ಸ್ವಾತಂತ್ರ್ಯವೇ ಇ ಲ್ಲಿಲ್ಲ. ಅವರು ಆ ಮಂದಿರದಿಂದ ಒಂದು ಹೆಜ್ಜೆ ಕೂ ಹೊರಗೆ ಇಡುವಂತಿರಲಿಲ್ಲ. ಯಾರೂ ಆ ಸ್ತ್ರೀಯರನು ಅಲ್ಲಿಗೆ ಬಂದು ನೋಡಲಿಕ್ಕೆ ಅವಕಾಶ-ಅನುಮತಿಗಳ

ಿಲ್ಲ. ವಿಲಾಸಮಂದಿರದಲ್ಲಿದ್ದ ಬಂಧುವರ್ಗದವರಿಗೂ ಅಲ್ಲಿಯ ಪ್ರವೇಶ ನಿರೋಧಿಸಲಾಗಿತ್ತು. ಸ್ವಾತಂತ್ರ್ಯವನ್ನುಳಿದು ಮಿಕ್ಕೆಲ್ಲಾ ಸುಖಗಳೂ ಅಲ್ಲಿತ್ತು

—ಅದು ರುದ್ರನಾಯಕನ ಪಾಲಿಗೆ ವಿಲಾಸಮಂದಿರ; ಆದರೆ ಅಲ್ಲಿದ್ದ ಹೆಂಗಸರಿಗದು ಕಾರಾಗಾರ.

ನಾಯಕನ ವಿಲಾಸಮಂದಿರದಲ್ಲಿದ್ದ ಹನ್ನೆರಡುಮಂದಿ ವನಿತೆಯರೂ ಪರಮ ಸುಂದರಿಯರಾಗಿದ್ದರು. ಒಬ್ಬೊಬ್ಬರಲ್ಲಿ ಒಂದೊಂದು ಸೌಂದರ್ಯವಿಶೇಷವಿದ್ದಿತು. ಒಬ್ಬಳನ್ನು ಅವಳ ಆಕರ್ಷಕ ಕೇಶರಾಶಿಯಿಂದ ತಂದಿದ್ದರೆ. ನಾಯಕ ಮತ್ತೊಬ್ಬಳನ್ನು ಅವಳ ಸೊಬಗಿನ ನಾಸಿಕದ ಮಾಟಕ್ಕೂ ಇನ್ನೊಬ್ಬಳನ್ನು ಅವಳ ತುಂಬಿದೆದೆಗಾಗಿಯೂ; ಮಗದೊಬ್ಬಳನ್ನು ಅವಳ ಮಿಂಚುವ ಸೊಗಸಿನ ಕಂಗಳಿಗಾಗಿ ತಂದಿದ್ದ.

—ನಾಯಕನ ವಿಲಾಸಮಂದಿರವೆಂದರೆ, ಅದೊಂದು ಸ್ತ್ರೀ ಸೌಂದರ್ಯದ ವೈವಿಧ್ಯತೆಯ ಪ್ರದರ್ಶನ ಮಂದಿರ.

ಆ ವಿಲಾಸಮಂದಿರದಲ್ಲಿ ವಿವಿಧ ವಯಸ್ಸಿನ ಹೆಂಗಸರಿದ್ದರು. ಆಗತಾನೆ 'ದೊಡ್ಡವರಾಗಿದ್ದ' ಹುಡುಗಿಯು

ರಿದ್ದರು ; ಸಂಪೂರ್ಣ ಹರಯ ಹೊತ್ತ ಹೆಣ್ಣುಗಳಿದ್ದವು ;
ತಾಯ್ತನದ ಆನಂದವನ್ನು ಕಂಡುಂಡಿದ್ದ ಹೆಂಗಸರಿದ್ದರು;
ಮದುವೆಯಾಗಿ, ಹೊಸದಾಗಿ ಸಂಸಾರ ಆರಂಭಿಸಿದ್ದ,
ಇನ್ನೊಬ್ಬರ ಹೆಂಡಿರೂ ಅಲ್ಲಿದ್ದರು.

—ಎಲ್ಲರಿಗೂ ಒಂದೆ-ಬಲಾತ್ಕಾರದ ಬಂಧನ. ಅವ
ರಾರೂ ಬಯಸಿ ಬಂದವರಲ್ಲ; ಬಂಧಿಸಿ ತರಲ್ಪಟ್ಟವರು.

ವಿಲಾಸಮಂದಿರದವರ ದೃಷ್ಟಿಯಲ್ಲಿ ಅವರೇ, ಅವರಿಗೇ
ತಾವು ಮನುಷ್ಯರೆಂದೂ ಮರೆತುಹೋಗಿತ್ತು. ತಾವು
ನಾಯಕನ ಕಾಮದಾಹವನ್ನು ತೃಪ್ತಿಪಡಿಸುವಂತಹ
ಕೇವಲ ರತಿಸುಖದ ಬೊಂಬೆ ಎಂದು ಅವರಿಗೇ ಅರಿವಾ
ಗುತ್ತಿತ್ತು. ನಾಯಕನ ಸಹವಾಸ ಅವರಿಗೆ ಪ್ರಿಯ
ವಾಗಿರದೆ ಪ್ರೇತರೂಪವಾಗಿತ್ತು.

—ಅವರಿಗೆ ಆ ವಿಲಾಸಮಂದಿರವೊಂದು ನಿರಾಶೆಯ
ನಿಲಯವಾಗಿತ್ತು.

ಹನ್ನೆರಡು ಸಂಸಾರಗಳಿಗೆ ಸಮಾಧಿ ಕಟ್ಟಿ, ನಾಯಕ
ಅದರಮೇಲೆ ತನ್ನ ವಿಲಾಸವನ್ನನುಭವಿಸುತ್ತಿದ್ದ. ಅವ
ನಿಗೆ ಆ ವನಿತೆಯರುಗಳ ಗೋಳು ಬೇಕಾಗಿರಲಿಲ್ಲ;

ಅವರು ಬೇಕಾಗಿದ್ದರು; ಅವರ ದೇಹ ಬೇಕಾಗಿದ್ದಿತು. ಅವರ ಮಿಕ್ಕ ವಿಷಯಗಳೆಲ್ಲಾ ಆತನಿಗೆ ಅನಗತ್ಯ ವಾಗಿತ್ತು.

೨

ನಾಯಕಪುರದ ಪ್ರಾಂತ್ಯವನ್ನು ಆಳುತ್ತಿದ್ದ ರುದ್ರನಾಯಕ ತನ್ನ ಸ್ವಶಕ್ತಿಯಿಂದಲೇ ಆ ಪ್ರಾಂತ್ಯವನ್ನು ತನ್ನ ಕೈವಶಮಾಡಿಕೊಂಡಿದ್ದ. ಮೊದಲಿನಿಂದಲೂ ರಾಜಕೀಯದಲ್ಲಿ ಆಸಕ್ತನಾಗಿದ್ದ ಆತ, ತನ್ನ ಹಿಂದಿನ ಪಾಳೆಯಗಾರನಾಗಿದ್ದ ಮಲ್ಲನಾಯಕನ ಮೇಲೆ ಜನತೆಯಲ್ಲಿ ದ್ವೇಷವನ್ನು ಮೂಡಿಸಿ, ತನ್ನ ನಾಯಕತ್ವದಲ್ಲಿ ಜನತೆ ಮಲ್ಲನಾಯಕನ ಮೇಲೆ ದಂಗೆ ಏಳುವಂತೆ ಮಾಡಿ, ಮಲ್ಲನಾಯಕನೊಂದಿಗೆ ಹೋರಾಡಿ ಅವನನ್ನು ಸಮರದಲ್ಲಿ ಸೋಲಿಸಿ, ನಾಯಕಪುರದ ಪಾಳೆಯಪಟ್ಟನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡ.

ರುದ್ರನಾಯಕನಲ್ಲಿ ವಿಶ್ವಾಸವನ್ನಿಟ್ಟುಕೊಂಡಿದ್ದ ಜನತೆ ಅವನನ್ನೆ ಪಾಳೆಯಗಾರನನ್ನಾಗಿ ಮಾಡಿತು. ಅವನಿಂದ ಸುಖೀ ಆಡಳಿತವನ್ನು ನಿರೀಕ್ಷಿಸಿತ್ತು.

ಆದರೆ ಜನರ ನಿರೀಕ್ಷೆ ವಿಫಲವಾಯಿತು.

ಅಲ್ಲಿಯವರೆವಿಗೂ ಒಳ್ಳೆಯವನಂತಿದ್ದ ರುದ್ರನಾಯಕ ಪಾಳೆಯಗಾರನಾದ ಕೂಡಲೇ ಸರ್ವಾಧಿಕಾರಿಯಾದ. ನಿರಂಕುಶ ಪಾಳೆಯಗಾರನಾದ. ಯಾರು ತನ್ನ ಇಂದಿನ ಪದವಿಗೆ ಕಾರಣರಾಗಿದ್ದರೋ, ಅಂಥವರ ಹೆಂಡಿರನ್ನೇ ತಂಗಿಯರನ್ನೇ ತನ್ನ ನೂತನ ನಿರ್ಮಿತ ವಿಲಾಸಮಂದಿರಕ್ಕೆ ಬಲಾತ್ಕಾರದಿಂದ ಎಳೆದುಕೊಳ್ಳಲಾರಂಭಿಸಿದ.

ತನ್ನ ಭಂಡಾರ ತುಂಬಿಕೊಳ್ಳಲು, ತನಗೆ ಬಯಕೆಯಾದ ವಸ್ತುವನ್ನು ಪಡೆದುಕೊಳ್ಳಲು ನಾಯಕ ಹಿಂದು ಮುಂದು ನೋಡುತ್ತಿರಲಿಲ್ಲ. ಅದರಿಂದ ಜನರಿಗೆ ಅದೆಷ್ಟೇ ಸಂಕಷ್ಟ ಸಂಭವಿಸಿದರೂ ಸರಿ, ಅದನ್ನು ಅವನು ಗಣನೆಗೇ ತೆಗೆದುಕೊಳ್ಳುತ್ತಿರಲಿಲ್ಲ. ತನ್ನ ಸ್ವಾರ್ಥಕ್ಕಾಗಿ ಬೇಕಾದರೆ ಇಡೀ ಪಾಳೆಯಪಟ್ಟನ್ನೇ ಬಲಿ ತೆಗೆದುಕೊಳ್ಳಲೂ ಸಿದ್ಧನಿದ್ದ.

ರುದ್ರನಾಯಕನಿಗೆ ರಾಜಕೀಯದಲ್ಲಿ ಚಾಕಚಕ್ಯತೆ, ಸಕ್ತಿ, ಅಭಿರುಚಿಗಳಿದ್ದರೂ, ಅವನು ಪಾಳೆಯಗಾರತ್ವ ನ್ನು ಬಯಸಿ ಪಡೆದದ್ದು. ಜನಪ್ರಿಯನಾಗಿ ಪ್ರಾಂತ್ಯ ನ್ನು ಆಳಲಿಕ್ಕಲ್ಲ; ಸಾಮಾನ್ಯ ಮನುಷ್ಯನಾಗಿ ಪಡೆಯ ಾಗದ ಭೋಗ ಭಾಗ್ಯಗಳನ್ನು ಕೊಂಡು ಸವಿಯುವುದ ಕ್ಕಾಗಿಯೇ ಆತ ಪಾಳೆಯಗಾರನ ಪದವಿಯನ್ನು ಹಂಬ ಿಸಿ ಪಡೆದದ್ದು.

ನಾಯಕ ರಸಿಕನಾಗಿದ್ದರೂ, ಭೋಗಪ್ರಿಯನಾಗಿ ರೂ, ದರ್ಪಿಷ್ಟನಾಗಿದ್ದರೂ,——ಅಬಲನಾಗಿರಲಿಲ್ಲ. ರಾರಲ್ಲಿಯೂ ನಂಬಿಕೆಯನ್ನು ಇಡಲು ಇಷ್ಟವಿಲ್ಲದಿದ್ದ ತ ತನ್ನಲ್ಲಿಯೇ ನಂಬಿಕೆಯನ್ನಿಟ್ಟುಕೊಂಡು ನಡೆಯು ದ್ದ. ಪ್ರಜಾಪೀಡನೆ, ಪರಸ್ತ್ರೀಯರ ಶೀಲಭಂಗ ಇವು ಳು ಪಾಳೆಯಗಾರರಿಗೆ ವಿನಾಶಹೇತುವೆಂದು ಅವನಿಗೆ ಳಿದಿದ್ದರೂ, ಇರುವಷ್ಟು ದಿನಗಳಾದರೂ ಕೈಗೆ ಸಿಕ್ಕುವ ುಖದ ಸಾರವನ್ನು ಸಂಪೂರ್ಣವಾಗಿ ಸವಿದುನೋಡಿ ಬಿಡಬೇಕೆಂದೇ ನಾಯಕ, ಯಾರಿಗೂ ಹೆದರದೆ, ಯಾರ ಮೇಲೂ ದಯಾ ದಾಕ್ಷಿಣ್ಯಗಳನ್ನಿರಿಸದೆ, ತನ್ನಿಚ್ಛೆ ಬಂದಂ

ತೆಯೇ ನಡೆಯುತ್ತಿದ್ದ.

ನಿರಪರಾಧಿ ಮಲ್ಲನಾಯಕನ ಕೊಲೆಗೆ, ವಿನಾಕಾರಣ
ರುದ್ರನಾಯಕನಿಂದ ಪ್ರಚೋದಿತ ಉದ್ರಿಕ್ತರಾಗಿ ನಿಂ
ಜನತೆ, ಹೊಸ ಪಾಳೆಯಗಾರನ ನಿರಂಕುಶ ಪ್ರಜಾ
ಪೀಡನಾ ಪ್ರಭುತ್ವದಿಂದ ಕುಪಿತಗೊಂಡರು. ಆದ
ಆ ಕೂಡಲೆ ಜನತೆ ರುದ್ರನಾಯಕನ ಮೇಲೆ ಕೈಮಾಡ
ವಷ್ಟು ಸಮರ್ಥರಾಗಿರಲಿಲ್ಲ. ಅಂದರೆ ನಾಯಕ ಅಷ್
ಪ್ರಬಲನಾಗಿದ್ದ.

ನಾಯಕ ಎಷ್ಟು ಬಲಿಷ್ಟನಾಗಿದ್ದನೋ, ಅಷ್ಟು ಬುದ
ವಂತನೂ ಹೌದು. ತನ್ನ ಆಳ್ವಿಕೆ ದಬ್ಬಾಳಿಕೆಯದ
ಗಿದ್ದರೂ, ಜನತೆ ತನ್ನ ಮೇಲೆ ದಂಗೆ ಎದ್ದು ತನ್ನನ
ಸಿಂಹಾಸನಚ್ಯುತನನ್ನಾಗಿ ಮಾಡದಿರುವುದಕ್ಕೆ ಕೆಲ
ಸಾಧನಗಳನ್ನುಪಯೋಗಿಸಿ ಜಯಪ್ರದನಾಗಿದ್ದ
ಆದರೂ ಪ್ರಜೆಗಳ ಜ್ವಾಲೆ ಒಳಗೊಳಗೆ ಕುದಿಯುತ್ತಿತ್ತು

ಈ ನಾಯಕನ ಮನೋಭಾವಕ್ಕನುಗಣವಾದ ಇಬ್ಬ
ಆವನ ಸಚಿವರಿದ್ದರು. ಅವರು ನಾಯಕನಿಗೆ ದೂರ
ಸಂಬಂಧ. ಇವರ ಮಾತು ನಾಯಕನಿಗೆ ವೇದವಾ

ಾಗಿತ್ತು. ನಾಯಕನ ಮಾತು ಈ ಸಚಿವರುಗಳಿಗೆ
ೀದವಾಕ್ಯವಾಗಿತ್ತು.

ಈ ಸಚಿವರುಗಳು ಕೂಡ ನಾಯಕನಷ್ಟೇ ರಸಿಕರು;
ೂರ್ತರು. ಅವರೂ ವಿಲಾಸಪ್ರಿಯರು. ಆದರೆ ಅವರು
ಲಾಸಮಂದಿರವೆಂಬ ಪ್ರತ್ಯೇಕ ವನಿತೆಯರ ವಿಲಾಸ
ದನವನ್ನು ಸೃಷ್ಟಿಸಿಕೊಳ್ಳದೆ ಬೇರೆ ವಿಧವಾದ ಏರ್ಪಾಟು
ನ್ನು ಮಾಡಿಕೊಂಡಿದ್ದರು.

ಈ ಸಚಿವರುಗಳ ಹೆಸರು,—ವಿಜಯ ಮತ್ತು
ಾಮನರೆಂದು.

ವಿಜಯ, ನಾಯಕನಿಗೆ ರಾಜಕೀಯ ವರ್ತುಲದಲ್ಲಿ
ಷ್ಟ ಚಾಣಕ್ಯತನದಿಂದ ನೆರವಾಗುತ್ತಿದ್ದರೆ, ವಾಮನ
ಾಯಕನಿಗೆ ವನಿತೆಯರುಗಳನ್ನು ಹಿಡಿದು ತಂದೊಪ್ಪಿ
ು ಸಹಾಯಕನಾಗಿದ್ದ.

ನಾಯಕನ ವಿಲಾಸಮಂದಿರದಲ್ಲಿದ್ದ ಸ್ತ್ರೀಯರನ್ನೆಲ್ಲಾ
ಲಾತ್ಕಾರದಿಂದ ಹಿಡಿದು ತಂದಿದ್ದವನೆ, ವಾಮನ.

೩

ಪಾಳೆಯಪಟ್ಟನ್ನು ಸಂಪಾದಿಸುವವರೆಗೂ ಅವಿವಾಹಿತ
ನಾಗಿಯೇ ಉಳಿದಿದ್ದ ರುದ್ರನಾಯಕ, ಪಾಳೆಯಗಾರ
ನಾದ ಕೂಡಲೇ ಧರ್ಮರೀತ್ಯ ಮದುವೆ ಮಾಡಿಕೊಂಡ.
ಕೊಳ್ಳೇಗಾಲದ ಕಡೆಯ ಪಾಳೆಯಗಾರನೊಬ್ಬ ತನ್ನ
ಮಗಳನ್ನು ರುದ್ರನಾಯಕನಿಗೆ ಮದುವೆಮಾಡಿಕೊಟ್ಟ.

ರುದ್ರನಾಯಕನನ್ನು ಕೈಹಿಡಿದ ಧರ್ಮಪತ್ನಿ ಮಹಾ
ದೇವಿ ಪರಮಸುಂದರಿ. ಅವಳ ಸುಗುಣತ್ವ, ಸೌಶೀಲ್ಯ
ಪಾಳೆಯಗಾರರುಗಳ ಮನೆತನಗಳಲ್ಲೆಲ್ಲಾ ಮನೆಮಾತಾ
ಗಿತ್ತು. ಮಹಾದೇವಿ ಎಂದೂ ಯಾರಿಗೂ ಕೇಡೆಣಿ
ದವಳಲ್ಲ. ತಂದೆಯ ಮನೆಯಲ್ಲೂ ಆಕೆ ಸಂಪದದ
ನಡುವೆ ಬೆಳೆದು ಬಂದವಳು. ಕೈಹಿಡಿದ ಗಂಡನ ಮನೆ
ಯೂ ಸೌಖ್ಯಸದನವಾಗಿತ್ತು. ಆದರೂ ಮಹಾದೇವಿ
ನಿರಾಡಂಬರೆಯಾಗಿದ್ದಳು. ಎಂದಿಗೂ ಅವಳಲ್ಲಿ ಧ

ವೆನಾಗಲಿ, ಐಶ್ವರ್ಯದ ದರ್ಪವಾಗಲಿ ತಲೆಹಾಕಿಯೇ
ರಲಿಲ್ಲ.

ರುದ್ರನಾಯಕನನ್ನು ವಿವಾಹವಾಗಿ ನಾಯಕಪುರದ
ವನ ಭವನಕ್ಕೆ ಬಂದಮೇಲೂ ಅವಳ ಪೂರ್ವದ ಗುಣ
ದಲಾಗಿರಲಿಲ್ಲ.

ಮಹಾದೇವಿ ಈಶ್ವರನ ಪರಮಭಕ್ತಳು. ಪ್ರತಿ ಶುಕ್ರ
ವಾರದ ದಿನವೂ ನಾಯಕಪುರದ ಗಂಗಾಧರೇಶ್ವರನ
ದೇಗುಲಕ್ಕೆ ದಯಮಾಡಿಸಿ, ವಿಶೇಷ ಪೂಜೆ ಪುರಸ್ಕಾರ
ಗಳನ್ನು ಶಿವನಿಗೆ ಸಲ್ಲಿಸುತ್ತಿದ್ದಳು.

ನಾಯಕನ ರಾಣಿಯಾದರೂ ಮಹಾದೇವಿ ಎಂದೂ
ದೇವಸ್ಥಾನಕ್ಕೆ ರಾಜವೈಭವದಿಂದ ವಾಹನದಲ್ಲಿ ಕುಳಿತು
ಬರುತ್ತಿರಲಿಲ್ಲ. ಮಿತಪರಿವಾರದೊಂದಿಗೆ ನಡೆದುಕೊಂಡು
ಬಂದು, ದೇವರಿಗೆ ಪೂಜೆ ಸಲ್ಲಿಸಿ, ಮತ್ತೆ ತನ್ನ ಭವನಕ್ಕೆ
ನಡೆದುಕೊಂಡೇ ಹೋಗುತ್ತಿದ್ದಳು. ಆಗ ರಾಣಿಯ
ದರ್ಶನವನ್ನು ಯಾರು ಬೇಕಾದರೂ ಪಡೆಯಬಹುದಾ
ಗಿತ್ತು. ಆಗ ಬಹುಜನ ಮಹಾದೇವಿಯ ಅಪ್ಸರೆಯಂ
ತಹ ರೂಪಕ್ಕೆ ತಲೆದೂಗಿದರೆ, ಮತ್ತೆ ಕೆಲವರು ರಾಣಿಯ

ಭಕ್ತಿಗೆ ಮೆಚ್ಚಿಕೊಂಡರೆ, ಇನ್ನು ಕೆಲವರು ಅವಳ ನಿರಾಡಂಬರತ್ವಕ್ಕೆ ಪ್ರಶಂಸಿಸುತ್ತಿದ್ದರು.

ಮಹಾದೇವಿ ಗಂಗಾಧರೇಶ್ವರನ ದೇವಸ್ಥಾನಕ್ಕೆ ಬಂದು ಪೂಜೆ ಸಲ್ಲಿಸಿದನಂತರ, ಸ್ವಲ್ಪ ಹೊತ್ತು ಡೇಗುಲದ ಕೈಸಾಲೆಯಲ್ಲಿ ಕುಳಿತುಕೊಳ್ಳುತ್ತಿದ್ದಳು. ಪ್ರಜೆಗಳು ಆಗ ತಮ್ಮ ಕಷ್ಟ ಸುಖಗಳನ್ನು ಅವಳಲ್ಲಿ ತೋಡಿಕೊಳ್ಳುತ್ತಿದ್ದರು. ಮಹಾದೇವಿ ಅವರಿಗೆ ಸೂಕ್ತ ಸಮಾಧಾನವನ್ನು ಹೇಳಿ ಅವರ ಸಂಕಷ್ಟವನ್ನು ನಿವಾರಿಸಲು ತಾನು ಪ್ರಯತ್ನಪಡುವುದಾಗಿ ಅವರಿಗೆ ಭರವಸೆಯನ್ನು ಕೊಡುತ್ತಿದ್ದಳು.

ದೇವಸ್ಥಾನದ ಕೈಸಾಲೆಯಲ್ಲಿ ಪ್ರಜೆಗಳ ತೊಂದರೆಗೆ ಅಭಯದಾನ ಮಾಡಿದ ಮಹಾದೇವಿ ನಂತರ ಅದನ್ನು ಭವನಕ್ಕೆ ಬಂದು ಮರೆತು ಬಿಡುತ್ತಿರಲಿಲ್ಲ. ರಾತ್ರಿ ಬಹು ತಡವಾಗಿ ತನ್ನ ಶಯನಾಗೃಹದಕ್ಕೆ ಬರುತ್ತಿದ್ದ ನಾಯಕನಿಗಾಗಿ ಆ ಅವೇಳೆಯವರೆವಿಗೂ ಎಚ್ಚರದಿಂದಿರುತ್ತಿದ್ದಳು. ನಾಯಕ ತನ್ನ ಸಜ್ಜೆಯ ಮನೆಗೆ ಬಂದ ಕೂಡಲೇ, ಅವನನ್ನು ಸ್ವಾಗತಿಸಿ ಕರೆದುಕೊಂಡು ಬಂದು

ಸ್ತ್ರೀ ಸಹಜವಾದ ಚರ್ಯೆಗಳಿಂದ ರವಿಸುತ್ತಾ,

" ಪರಸ್ತ್ರೀಯರನ್ನು ಪೀಡಿಸುವುದು ಧರ್ಮವಲ್ಲ. ಧಣಿ "

—ಎಂದು ಮಹಾದೇವಿ ನಾಯಕನೊಂದಿಗೆ ಮಾತಿಗಾರಂಭಿಸುತ್ತಿದ್ದಳು.

" ಅದು ನನ್ನ ಸ್ವಂತ ವಿಷಯ. ಅದಕ್ಕೆಲ್ಲಾ ನೀನು ಕೈಹಾಕುವುದು ಉಚಿತವಲ್ಲ "

—ನಾಯಕ ಹೆಂಡತಿಯ ನುಡಿಗೆ ಸಿಡುಕಿನಿಂದಿಲೇ ಉತ್ತರಿಸುತ್ತಿದ್ದ.

" ಧಣಿಯು ಪಾಳೆಯಪಟ್ಟು ಶಾಶ್ವತವಾಗಿ ಉಳಿಯ ಬೇಕೆಂಬುದೇ ನನ್ನ ಅಭಿಲಾಷೆ "

" ಹಾಗೆ ಉಳಿಸಿಕೊಳ್ಳುವ ಮಾರ್ಗ ನನಗೆ ತಿಳಿದಿಲ್ಲ ವೆಂದು ಹೇಳುವಿಯಾ? "

" ಅಪಾರ್ಥಮಾಡಿಕೊಳ್ಳಬೇಡಿ, ನನ್ನದೊರೆ. ಪರ ಸ್ತ್ರೀ ದುಃಖದಿಂದ ಸುರಿಸುವ ಕಣ್ಣೀರು ನಿಮಗೆ ನಿಮ್ಮ ಪಾಳೆಯಪಟ್ಟಿಗೆ ಒಳ್ಳೆಯದನ್ನು ಮಾಡಲಾರದು "

"ಪರಸ್ತ್ರೀಯ ಕಣ್ಣೀರಿನಲ್ಲಿ ನನ್ನ ಸುಖ ಅಡಗಿರುವು

ದಾದರೆ ?"

" ಅದು ಸುಖವಲ್ಲ; ವಿನಾಶಹೇತು "

" ಮಹಾದೇವಿ, ನನ್ನ ಸ್ವಬುದ್ಧಿ ಸ್ವಶಕ್ತಿಗಳಿಂದ ಈ ಪಾಳೆಯಪಟ್ಟನ್ನು ಸಂಪಾದಿಸಿರುವನಾನು ಇಂದು ನಿನ್ನಿಂದ ಕಲಿಯಬೇಕಾದ ಯಾವ ಪಾಠಗಳೂ ಇಲ್ಲ "

" ಹಾಗಾದರೆ ಅಷ್ಟು ವಿದ್ಯಾಸಂಪನ್ನರೆ, ನೀವು?"

" ಅದು ನಿನಗೆ ಅನಗತ್ಯವಾದ ವಿಷಯ?"

" ಅಂದರೆ ನೀವು ಯಾರು?. ನಾನು ಯಾರು?"

" ನೀನು ನನ್ನ ಹೆಂಡತಿ. ನಾನು ನಿನ್ನ ಗಂಡ. ನೀನು ನನಗೆ ಸರ್ವವಿಧದಲ್ಲೂ ಅಧೀನಳೆ ವಿನಃ ನಾನು ಅಧೀನ ನಲ್ಲ "

" ಗಂಡ ಹೆಂಡಿರಲ್ಲಿ ಸರ್ವಾಧಿಕಾರದ ಪ್ರಶ್ನೆಯೇ ಬಾರದು ಸ್ವಾಮಿ. ಯಾರ ಒಳ್ಳೆಯದಕ್ಕಾಗಿ ಯಾರು ಬೇಕಾದರೂ ಉಪದೇಶಿಸಬಹುದು. "

" ಅಂದರೆ ಮೂರ್ಖನಾದ ನನಗೆ, ಬುದ್ಧಿವಂತಳಾಗಿ ನೀನು ಈಗ ಉಪದೇಶ ಮಾಡುತ್ತಿರುವೆಯಾ?"

" ಅಷ್ಟು ದೊಡ್ಡ ಮಾತು ಬೇಡಾ ದೊರೆ. ನೀವು ಕೀರ್ತಿಶಾಲಿಗಳಾಗಿ, ಜನಪ್ರಿಯ ದೊರೆಗಳಾಗಿ ಬಾಳ ಬೇಕಾಗಿರುವುದೇ ನನಗೆ ಬೇಕಾಗಿರುವುದು. ಅದಕ್ಕೇ ಇಷ್ಟು ಮಾತುಗಳನ್ನಾಡುತ್ತಿರುವೆನು."

"ಅಂದರೆ, ನಾನೀಗ ಪ್ರಜಾಪೀಡನೆ ಮಾಡುತ್ತಿರುವೆ ನಲ್ಲವೆ ?"

"ಹೌದು. ಖಂಡಿತವಾಗಿಯೂ, ನೀವು ಪ್ರಜೆಗಳ ಕಣ್ಣೀರ ಕಡಲಿನಲ್ಲಿ ನಿಮ್ಮ ಆಳ್ವಿಕೆಯ ನೌಕೆಯನ್ನು ಹರಿಸುತ್ತಿರುವಿರಿ."

"ಮಹಾದೇವಿ..........."

"ಕೋಪ ಮಾಡಿಕೊಳ್ಳಬೇಡಿ ನನ್ನ ದೊರೆ. ಮೊದಲು ನಿಮ್ಮ ವಿಲಾಸಮಂದಿರವನ್ನು ನಿರ್ನಾಮಗೊಳಿಸಿ, ಅಲ್ಲಿಯ ಹೆಂಗೆಳೆಯರನ್ನು ಬಿಡುಗಡೆ ಮಾಡಿ."

"ವಿಲಾಸ ಮಂದಿರದಿಂದ ನಿನಗೇನು ತೊಂದರೆಯಾಗಿದೆ?"

ವ್ಯಕ್ತಿಗತವಾಗಿ ನನಗ್ಯಾವ ತೊಂದರೆಯೂ ಆಗಿಲ್ಲ-ಆದರೆ ನನ್ನ ಸ್ವಜಾತೀಯ ಸ್ತ್ರೀಯರು ವಿಲಾಸದ ಹೆಸರಿ

ನಲ್ಲಿ ಕಾರಾಗೃಹವಾಸವನ್ನನುಭವಿಸುವುದನ್ನು ಮಾತ್ರ ನಾನು ನೋಡಲಾರೆ."

" ನಾನು ರಸಿಕ. ಅದಕ್ಕೆ ನನಗೂ ವಿಲಾಸಮಂದಿರ ಬೇಕು"

"ಇಲ್ಲ; ನೀವು ರಸಿಕರಲ್ಲ ರಸಿಕತೆಯ ಸೋಗನ್ನು ಧರಿಸಿರುವ ತುಚ್ಛ ಕಾಮುಕರು ನೀವು. ನಿಮ್ಮಲ್ಲಿ ಪ್ರೀತಿ ಇರದೆ ಹುಡುಗಿಯನ್ನು ಅನುಭವಿಸುವ ನೀವು ಅದೆಂತಹ ರಸಿಕಾಗ್ರಣಿಗಳು? ತನ್ನ ಮೇಲೆ ಒಲವಿರದ ಹೆಣ್ಣನ್ನು ರಸಿಕನೆಂದಿಗೂ ಅನುಭವಿಸಲಾರ. ರಾಮಾಯಣದ ರಾವಣನಿನ್ನೂ ಮೇಲುಮಟ್ಟದ ರಸಿಕ. ಸೀತೆಯನ್ನು ಕದ್ದು ಹೊತ್ತು ತಂದವನು ಆಕೆಯನ್ನು ಸೆರೆಯಲ್ಲಿಟ್ಟನೇ ಹೊರತು ಬಲಾತ್ಕಾರದಿಂದ ಅನುಭವಿಸಲು ಪ್ರಯತ್ನಿಸ ಲಿಲ್ಲ. ಕಾರಣ, ಒಲಿಯದ ಹೆಣ್ಣಿನೊಂದಿಗೆ ಕ್ರೀಡಿಸು ವುದು ಸುಖಕರವಲ್ಲವೆಂದು ರಸಿಕಾಗ್ರಣಿ ರಾವಣನಿಗೆ ಚೆನ್ನಾಗಿ ಗೊತ್ತಿತ್ತು. ಈಗ ಹೇಳಿ ಸರಿಯಾದ ರಸಿಕರು ಯಾರೆಂದು?"

"ಅಂದರೆ ನಾನು ರಾವಣನಿಗಿಂತಲೂ ನೀಚನೆಂದು

ನಿನ್ನ ಅಭಿಪ್ರಾಯವೆ?"

"ನೀವು ನೀಚರೆಂದು ಹೇಳಲಿಲ್ಲ. ರಸಿಕರಲ್ಲ ನೀವು, ಅರಸಿಕರೆಂದು ಹೇಳಿದೆ."

"ನೀನು ಏನು ಬೇಕಾದರೂ ಹೇಳಿಕೊ. ನನಗೆ ಸುಖವೆಂದು ತೋರುವುದನ್ನು ಮಾತ್ರ ನಾನು ಮಾಡದೆ ಬಿಡುವುದಿಲ್ಲ."

"ಅದು ಅಧರ್ಮ. ಆತ್ಮನಾಶದ ಹೆದ್ದಾರಿ."

"ಅದನ್ನು ಕಟ್ಟಿಕೊಂಡು ನನಗೇನಾಗಬೇಕು"

"ಹಾಗಾದರೆ ಪ್ರಜೆಗಳ ಗತಿ?"

"ದೇವರೇ ಗತಿ!"

"ಇದ ರಾಜಾನುಗುಣವಲ್ಲ"

"ಈಗ ನಾನೇನು ಮಾಡಬೇಕೆಂದು ಹೀಗೆ ಪೀಡಿಸು ತ್ತಿದ್ದಿ ಮಹಾದೇವಿ"

"ಪ್ರಜಾಪೀಡನೆಯನ್ನು ಬಿಟ್ಟು, ಪರಸ್ತ್ರೀಯರ ಶೀಲ ಭಂಗ ಮಾಡುವುದನ್ನು ತೊರೆದು, ಸದ್ಗುರಿಯಿಂದ, ಸದ್ದಾರಿಯನ್ನೇ ಹಿಡಿದು, ಸದ್ಧರ್ಮದಿಂದ ಆಳ್ವಿಕೆಯನ್ನು ಮಾಡಿ ಎಂಬುದೇ ನನ್ನ ಮಾತಿನ ಸಾರ"

"ಮಹಾದೇವಿ, ಅನವಶ್ಯಕದ ಈ ಮಾತುಗಳು ಬೇಡ. ನನ್ನ ವರ್ತನೆಯಿಂದ ನಿನಗೇನಾದರೂ ತೊಂದರೆಯಾಗಿರುವದಾದರೆ ಹೇಳು, ಅದನ್ನು ಸರಿಪಡಿಸುತ್ತೇನೆ. ವಿಲಾಸಮಂದಿರವಿದ್ದ ಮಾತ್ರಕ್ಕೆ ನಾನು ನಿನ್ನನ್ನು ಪ್ರೀತಿಸುತ್ತಿಲ್ಲವೆ? ನಿನಗೆ ಬೇಕಾದ, ನೀನು ಬಯಸುವ ಸೌಖ್ಯಗಳನ್ನು ಕಲ್ಪಿಸಿಕೊಟ್ಟಿಲ್ಲವೆ"

"ಅದೆಲ್ಲಾ ನಿಜವೇ ಆದರೂ ನಿಮ್ಮ ಆಳ್ವಿಕೆ ಹೀನವಾದುದು. ನೀವು ಪರಸ್ತ್ರೀಯರ ಕಣ್ಣೀರಿನಲ್ಲೇ ನಿಮ್ಮ ಸುಖವಿಲಾಸಗಳನ್ನು ಕಾಣುವುದಾದರೆ, ನಮ್ಮ ಪಾಳೆಯಪಟ್ಟು ಬಹು ಬೇಗ ನಾಶವಾಗುವುದು ಖಂಡಿತ"

"ಇಷ್ಟು ಬುದ್ಧಿ ಹೇಳುವ ನೀನು, ನಮ್ಮ ಪಾಳೆಯಪಟ್ಟು ನಾಶವಾಗುವ ವೇಳೆಯಲ್ಲಿ ಅದನ್ನು ಸಂರಕ್ಷಿಸಬಲ್ಲೆಯಾ?-ಇಲ್ಲ. ರಾಜ್ಯ ಕಟ್ಟಿರುವ ನಾನೇ, ಅದು ನಾಶವಾಗುವ ಕಾಲದಲ್ಲೂ ಅದನ್ನು ಉಳಿಸಬೇಕಾದವನು"

"ನನ್ನಿಂದ ನಮ್ಮ ಪಾಳೆಯಪಟ್ಟು ರಕ್ಷಣೆ ಹೊಂದಬೇಕಾದ ಕಾಲ ಬಂದರೂ ಬರಬಹುದು."

"ಸರಿ ನಮ್ಮ ಪಾಳೆಯಪಟ್ಟನ್ನು ರಕ್ಷಿಸಲು, ಹೇಗಿದ್ದರೂ ನೀನು ಇರುವೆಯಲ್ಲ. ನನಗಿನ್ನು ಭಯವಿಲ್ಲ. ನನ್ನ ಇಷ್ಟ ಬಂದಂತೆಯೇ ನಾನು ವರ್ತಿಸುತ್ತೇನೆ. ನನ್ನ ಕಾರ್ಯಕ್ಕೆ ನೀನು ಅಡ್ಡಿ ಬರಬಾರದು. ಬಂದರೆ ನಿನ್ನಮೇಲಾಣೆ; ನಿನ್ನ ಗಂಗಾಧರೇಶ್ವರನಮೇಲಾಣೆ."

—ತನ್ನ ಮಾತಿನಿಂದ ಪತಿಯನ್ನು ಸರಿಯಾದ ಮಾರ್ಗಕ್ಕೆ ಕರತರಲು ಅಸಾಧ್ಯವೆಂದು ತಿಳಿದುಕೊಂಡ ಮಹಾದೇವಿ, ಮುಂದೇನೂ ಮಾತನಾಡದೆ ಸುಮ್ಮನಾಗಿ ಬಿಡುತ್ತಿದ್ದಳು.

ಆದರೂ ಪ್ರಜೆಗಳ ಕಷ್ಟವನ್ನು ನಿವಾರಿಸಲು ತನ್ನ ಪ್ರಪ್ರಯತ್ನವನ್ನು ಅವಲಂಬಿಸುತ್ತಿದ್ದಳು.

ನಾಯಕಪುರದ ಪಾಳೆಯಪಟ್ಟಿನ ಜನತೆ, ರಾಣಿ ಮಹಾದೇವಿಯ ಸದ್ಗುಣಗಳಿಗಾಗಿ; ರುದ್ರನಾಯಕನನ್ನು ಪದಚ್ಯುತನನ್ನಾಗಿ ಮಾಡುವ ತಮ್ಮ ಕ್ರಾಂತಿಯ ಕಾರ್ಯವನ್ನು ಮುಂದುಮುಂದಕ್ಕೆ ಹಾಕಿಕೊಂಡು ಹೋಗುತ್ತಿದ್ದರು.

ರುದ್ರನಾಯಕನ ಪ್ರಜಾಪೀಡನೆಯ ನಿರಂಕುಶ ಪ್ರಭುತ್ವವನ್ನು, ಮಹಾದೇವಿ ತನ್ನ ಧರ್ಮಪೂರ್ಣ ಗುಣಗಳಿಂದ ಮರೆಸುತ್ತಿದ್ದಳು.

ಮಹಾದೇವಿಯ ಇರುವಿಕೆಯಿಂದಲೇ, ರುದ್ರನಾಯಕ ಉಳಿದುಕೊಂಡಿದ್ದ. ಇಲ್ಲಿದಿದ್ದರೆ ಎಂದೋ ನಾಯಕ ನಿರ್ನಾಮವಾಗಿ ಹೋಗುತ್ತಿದ್ದ.

೪

ಗಂಗಾಧರೇಶ್ವರನ ದೇಗುಲದ ಕೈಸಾಲೆಯಲ್ಲಿ ಪ್ರತಿ ಶುಕ್ರವಾರವೂ ಕುಳಿತು ಪ್ರಜೆಗಳ ಸುಖ-ಕಷ್ಟಗಳನ್ನು ವಿಚಾರಿಸಿಕೊಳ್ಳುತ್ತಿದ್ದ ಮಹಾದೇವಿಯ ಹೃದಯ ದಿನಗಳೆಯುತ್ತಿದ್ದಂತೆಲ್ಲ, ಶೋಕದಲ್ಲಿ ಮುಳುಗಿತು. ನಾಯಕನ ವಿಲಾಸಕ್ಕಾಗಿ ತಮ್ಮ ತಂಗಿ, ಸತಿ, ಮಾತೆಯರುಗಳನ್ನು ಕಳೆದುಕೊಂಡವರ ಆರ್ತನಾದ ಮಹಾದೇವಿಯನ್ನು ನಡುಗಿಸುತ್ತಿದ್ದಿತು.

ಅದೊಂದು ರುದ್ರ ಶುಕ್ರವಾರ. ಮಹಾದೇವಿ ತನ್ನ ಪದ್ಧತಿಯಂತೆ ದೇವಸ್ಥಾನಕ್ಕೆ ಆಗಮಿಸಿ, ಶಿವಪೂಜೆಯ ನಂತರ, ಸೇರಿದ್ದ ಜನರೊಂದಿಗೆ ವಿಚಾರ ವಿನಿಮಯ ಮಾಡುತ್ತಿದ್ದಳು. ಇದ್ದಕ್ಕಿದ್ದಂತೆಯೇ ದುಃಖವೇ ಮೂರ್ತಿವೆತ್ತಿದಂತಿದ್ದ ಸ್ತ್ರೀಕಂಠವೊಂದು, ಜನರ ಗುಂಪಿನಿಂದ ಮುಂದೆಬಂದು ಮಹಾದೇವಿಯ ಮುಂದೆ ನಿಂತಿತು.

—ಮಹಾದೇವಿ ಬಂದು ನಿಂತ ಸ್ತ್ರೀ ವ್ಯಕ್ತಿಯನ್ನು
ನೋಡಿದಳು.

........ಮಧ್ಯವಯಸ್ಸನ್ನು ದಾಟಿದ್ದ ಹೆಂಗಸೊಬ್ಬಳ
ದುಃಖಪೂರಿತಳಾಗಿ ನಿಂತಿದ್ದಾಳೆ. ಅವಳ ಎರಡು
ಕಂಗಳಿಂದಲೂ ಕಣ್ಣೀರು ಧಾರಾಕಾರವಾಗಿ ಇಳಿಯು
ತ್ತಿದೆ. ಅವಳ ಮುಖ ವಿಪರೀತವಾದ ವ್ಯಾಕುಲತೆ
ವಸತಿಯಾಗಿದೆ. ಅಂತೆಯೇ ಕುಳಿತಿದ್ದ ಮಹಾದೇವಿ
ಆಕೆ ಕೈಮುಗಿದುಕೊಂಡು ನಿಂತಿದ್ದಾಳೆ.........

"ನನ್ನ ಸಂಸಾರ ಸರ್ವನಾಶವಾಗಿ ಹೋಯಿತು
ಮಹಾರಾಣಿ"

—ಎಂದು ಆ ಹೆಂಗಸು ಮಹಾದೇವಿಗೆ ಹೇಳುತ್ತ
ಗೋಳಾಡತೊಡಗಿದಳು. ಮಹಾದೇವಿ ಆ ಸ್ತ್ರೀಯನ್ನ
ಪಕ್ಕಕ್ಕೆ ಕರೆದು ಕೂಡಿಸಿಕೊಂಡು,

"ಸಮಾಧಾನತಂದುಕೊಂಡು ಏನಾಯಿತು ಹೇಳಮ್ಮ

—ಎಂದು ಆಕೆ ತನ್ನ ಅಕ್ಕನೊ, ತಂಗಿಯೊ ಎಂಬ
ಅವಳ ತಲೆಗೂದಲನ್ನು ನೇವರಿಸಲಾರಂಭಿಸಿದಳು.

"ನಾಡ ನಾಯಕರು ನನ್ನ ಮನೆಯನ್ನು ತೊಳ

ು ಮಹಾರಾಣಿ”

—ಎಂದು ಮತ್ತೆ ಆಕೆ ಕಣ್ಣೀರನ್ನು ಸುರಿಸಿದಳು.

ವಿಷಯವೇನೆಂಬುದನ್ನೇ ತಿಳಿಸದೆ, ಹೀಗೆ ಅತ್ತರೆ-
ಪ್ರಯೋಜನವಮ್ಮ. ನಾಯಕರಿಂದ ನಿನಗೇನು
ಹುತ ಸಂಭವಿಸಿತೆಂದು ಸಾವಧಾನದಿಂದ ಹೇಳು.
ಾದಷ್ಟು ನಿನ್ನ ಅಳಲನ್ನು ನಾನು ನಿವಾರಿಸಲು
ತ್ನಿಸುತ್ತೇನೆ”

—ಮಹಾದೇವಿ ಆಕೆಗೆ ಅಭಯದಾನ ನೀಡಿದಳು.

ಹಾದೇವಿಯ ಅಭಯದಿಂದ ಆಕೆ ತನಗೊದಗಿದ್ದ
ನ್ನು ವಿವರಿಸಲಾರಂಭಿಸಿದಳು—

ಅಯ್ಯೋ ರುದ್ರನಾಯಕರು ನನ್ನ ಸಂಸಾರದ
ಮೇಲೆ ಕಲ್ಲುಚಪ್ಪಡಿಯನ್ನೆಳೆದು ಬಿಟ್ಟಿದ್ದಾರೆ,
ು. ಆದರಿಂದ ನಾನಿನ್ನು ಬದುಕಿರುವಂತೆಯೇ ಇಲ್ಲ.
ಬಂಧುವರ್ಗದಲ್ಲಿ ನಾನು ನನ್ನ ಮುಖವನ್ನು
ಿಸದಹಾಗಾಗಿ ಹೋಗಿದೆ. ಈಗ ನೀನೇ ನನ್ನ
ನ್ನು ಪರಿಹರಿಸಬೇಕಾಗಿದೆ. ನಿನ್ನಿಂದಲೂ ನನ್ನ
ಳು ಪರಿಹಾರವಾಗದೆ ಹೋದರೆ ನಾನು ಕೆರೆ

ಯನ್ನೋ ಭಾವಿಯನ್ನೋ ಆಶ್ರಯಿಸಬೇಕು.... ನ
ಇದೇ ನಾಯಕ ಪುರದವಳು. ಗಂಡನನ್ನು ಕ
ಕೊಂಡಿರುವ ವಿಧವೆ ನಾನು. ನನಗೆ ಒಬ್ಬಳೇ ಮ
ಅವಳಿಗೆ ಮದುವೆಮಾಡಿ ಇನ್ನು ಒಂದು ವರ್ಷವೂ
ದಿಲ್ಲ. ಅವಳು ಮದುವೆಯಾಗಿ ಹೋದಂದಿನಿಂದ
ನನ್ನ ಮನೆಗೆ, ಅಂದರೆ ತೌರುಮನೆಗೆ ಬಂದೇ ಇರ
ನನ್ನ ಮಗಳಿಗೆ ಮೊನ್ನೆ ದಿನ ಏಕೋ ಏನೋ ನನ್ನ
ನೋಡಬೇಕೆನಿಸಿತಂತೆ. ತನ್ನ ಗಂಡನ ಅನುಮತಿಯ
ಬೇಡಿ, ತನ್ನ ಮೈದುನನ ಸಂಗಡ ನಿನ್ನೆಯ ದಿನ
ನನ್ನ ಮನೆಗೆ ಬಂದಳು. ನಾಯಕರು ನನ್ನ ಮಗ
ಎಲ್ಲಿ ನೋಡಿದರೋ, ಅಂತೂ ಅವಳ ಅವಳಲ್ಲಿ ನೆ
ಗೊಂಡು. ಈ ದಿನ ಬೆಳಿಗ್ಗೆ ಆ ಧೂರ್ತ ಮಂತ್ರಿ
ನನ ಸಹಾಯದಿಂದ ವಿಲಾಸಮಂದಿರಕ್ಕೆ ಕರೆದುಕೊ
ಹೋಗಿಬಿಟ್ಟಿದ್ದಾರೆ. ಈಗ ತಾವು ನನ್ನ ಸಹಾಂ
ಬಾರದಿದ್ದರೆ, ನನ್ನ ಮಗಳು ವಿಲಾಸ ಮಂದಿರ
ಮುಕ್ತಳಾಗುವಂತೆಯೇ ಇಲ್ಲ. ನನ್ನ ಮಗಳು ವಿ
ಮಂದಿರದಲ್ಲೇ ಸೇರಿಹೋದರೆ, ಊರಿನಲ್ಲಿರುವ

ನಿಗೆ ಏನು ಉತ್ತರ ಹೇಳಲಿ? ಬಂಧುವರ್ಗದಲ್ಲಿ
ಹೇಗೆ ನನ್ನ ತಲೆಯನ್ನೆತ್ತಿಕೊಂಡು ಬಾಳಲಿ?
ನಾಗುವುದಿಲ್ಲ. ದಯಮಾಡಿ ತಾವು, ನಾಯ
ನ್ನ ಮಗಳ ಶೀಲಭಂಗ ಮಾಡುವ ಮುನ್ನವೇ
ನ್ನು ಬಿಡಿಸಿ ನನಗೊಪ್ಪಿಸಬೇಕು. ಇಲ್ಲದಿದ್ದರೆ
ಜೀವದೊರಸೆ ಬದುಕುವುದಿಲ್ಲ. ಭಾವಿಗೆ ಬಿದ್ದು
ತ್ಯಮಾಡಿಕೊಂಡು, ಪ್ರೇತವಾಗಿಯಾದರೂ ನಾಯ
ಗೋಳು ಹೊಯ್ದುಕೊಂಡು, ಕಡೆಗೆ ಅವರನ್ನು
ಕೊಂಡುಬಿಡುತ್ತೇನೆ. ನಾಯಕರ ಅಕಾರ್ಯ
ಪ್ರತೀಕಾರ ತೆಗೆದುಕೊಳ್ಳಲು ನನ್ನ ದೇಹದ ಪ್ರತಿ
ಬಿಂದು ರಕ್ತವೂ ಕುದಿಯುತ್ತಿದೆ. ಅಷ್ಟಕ್ಕೆ
ಅವಕಾಶ ಕೊಡದೆ, ನನ್ನ ಮಾನವನ್ನೂ, ನನ್ನ
ಮಗಳ ಶೀಲವನ್ನೂ ಕಾಪಾಡಿ ನಮ್ಮ ಸಂಸಾರ
ವು ಉಳಿಸಿಕೊಡಬೇಕು ಮಹಾರಾಣಿ. ಇನ್ನೂ
ದೆ. ರಾತ್ರಿಯವರೆವಿಗೂ ನಾಯಕರು ನನ್ನ
ೀಲಭಂಗ ಮಾಡಲಾರರು. ತಾವು ಈಗಲೇ
ನನ್ನ ಮಗಳನ್ನು ವಿಲಾಸಮಂದಿರದ ಸೆರೆ
ಬಿಡಿಸಬೇಕು"

—ತನ್ನ ಮಗಳನ್ನು ನಾಯಕನ ವಿಲಾಸವ್ಯಂ
ಅನಪೇಕ್ಷಣೀಯವಾಗಿ ಸೇರಗೊಟ್ಟಿದ್ದ ಆ ತಾಯಿಯ
ಪ್ರತಿಯೊಂದು ಮಾತೂ ಮಹಾದೇವಿಯನ್ನು ಮ
ಕೋಲಿನಿಂದ ಬಡಿದಂತಾಗಿತ್ತು. ತನ್ನ ಗಂಡನ ವಿ
ಆಡಿಸ್ತು ಪ್ರಜೆಗಳ ಮೇಲೆ ಧಾಳಿ ನಡೆಸುತ್ತಿದೆ
ಜೀವಂತ ಸಾಕ್ಷ್ಯದಿಂದ ಆಕೆ ತಿಳಿದುಕೊಂಡಳು.
ಯಕ ಧೂರ್ತತನವೇ ಉಗ್ರರೂಪ ತಳೆದು ಬಂದಿರ
ಅವಳ ಕಣ್ಣಿಗೆ ಕಟ್ಟಿತು. ಆ ತಾಯಿಯ ಕಣ್ಣೀರಿ
ಮಹಾದೇವಿಯ ಹೆಣ್ತನವನ್ನು ಕೆರಳಿಸಿತು.

ಆ ಮುದುಕಿ ಹೇಳಿದ ಮಾತುಗಳನ್ನು ಕೇಳಿ
ದೇವಿ, ಒ ದೆರಡು ಕ್ಷಣಗಳವರೆಗೆ ಆಕಾಶವನ್ನೆ
ಯೋಚಿಸುತ್ತಿದ್ದು ನಂತರ—

"ಇನ್ನೊಂದು ತಾಸಿನಲ್ಲಿ ನಿನ್ನ ಮಗಳು ನಿನ್ನ
ಯಲ್ಲಿಯೇ ಇರುವಂತಾಗುವುದೆಂದು ತಿಳಿದುಕೊಂಡ
ನಿನ್ನ ಮನೆಗೆ ಹೋಗು. ಒಂದು ಸಮಯ ನಿನ್ನ
ಶೀಲ ನನ್ನ ಧೂರ್ತ ಪತಿಯಿಂದ ಭಂಗವಾಗಿ
ನರೆ ಈ ಮಹಾದೇವಿ ಅಗ್ನಿಪ್ರವೇಶ ಮಾಡುವಳ

-ಎಂದು ಹೇಳಿದ ಮಹಾದೇವಿ ತನ್ನ ಪರಿವಾರದೊಂ
ಗೆ, ಬಿರುಸಿನ ಹೆಜ್ಜೆಗಳನ್ನಿಕ್ಕುತ್ತಾ ತನ್ನ ಭವನಾಭಿ
ಮುಖಳಾದಳು.

ಮಹಾದೇವಿಯ ಅಭಯವಚನವನ್ನೂ, ಅವಳು
ಮಾಡಿಹೋದ ಪ್ರತಿಜ್ಞೆಯ ನುಡಿಯನ್ನು ಕೇಳಿ, ಅಲ್ಲಿದ್ದ
ಪ್ರಜಾಸ್ತೋಮ ಒಂದು ನಿಮಿಷಕಾಲ ಸ್ತಬ್ಧವಾಯಿತು.
ಹಿಂತಿರುಗಿನೋಡದೆ ಸಾಗಿಹೋಗುತ್ತಿದ್ದ ಮಹಾದೇವಿ
ಆ ಪ್ರಜಾತಂಡಕ್ಕೆ ಪ್ರಸನ್ನ ದೇವತೆಯಂತೆ ಕಂಡಳು.

ಮಹಾದೇವಿ ಮಹಾ ನಿರ್ಧಾರಗೊಂಡು ಹೋಗುತ್ತಿದ್ದ
ವೇಗವನ್ನು ನೋಡಿದ, ಆ ಮಗಳನ್ನು ಕಳೆದುಕೊಂಡ
ತಾಯಿಗೆ, ತನ್ನ ಮಗಳು ತನ್ನ ಸಂಗಡವೇ ಇರುವಷ್ಟು
ಭರವಸೆ ಬಂದಿತು.

ಮಹಾದೇವಿ ಹೋಗುತ್ತಿದ್ದ ರೀತಿಯಲ್ಲಿ ಖಚಿತವಾದ
ನಿರ್ಧಾರವಿತ್ತು. ಆಡಿದುದನ್ನು ನಡೆಸಿಕೊಡುವ ಕೆಚ್ಚಿತ್ತು:
ಕೊಟ್ಟಿರುವ ವಚನವನ್ನು ನೆರವೇರಿಸಿಕೊಡಲು ಬೇಕಾ
ದರೆ ತನ್ನ ಪ್ರಾಣವನ್ನೇ ಪಣವನ್ನಾಗಿಡುವ ಧೀಮಂತಿಕೆ
ಯಿತ್ತು.

ಜನಸ್ತೋಮದ ನೋಟದಿಂದ ಮಹಾದೇವಿ ಮರೆಯಾದಾಗ, ಅವರಿಗೆ ತಾವು ಯಾವುದೊ ಪ್ರಿಯವಾದ ವಸ್ತುವನ್ನು ಕಳೆದುಕೊಳ್ಳುತ್ತಿರುವಂತೆ ಮನಸ್ಸಿಗೆ ಅರಿವಾಯಿತು.

೫

ಮಹಾದೇವಿ ಮಹಲಿಗೆ ಹೋಗುವ ವೇಳೆಗೆ ಮಹಲಿನಲ್ಲೆಲ್ಲಾ ರಂಗುರಂಗಿನ ದೀಪ ಬೆಳಗುತ್ತಿದ್ದಿತು. ದಿಕ್ಕು ದಿಕ್ಕುಗಳಿಂದಲೂ ದಶಾಂಗದ ಧೂಪ ಬೀಸಿಬರುತ್ತಿತ್ತು. ನಾಯಕ ಅಲ್ಲಿ ಮಹಾದೇವಿಯ ಕಣ್ಣಿಗೆ ಕಾಣಿಸಲೇ ಇಲ್ಲ.

ಎದುರಾದ ಸಖೀ ಜನರನ್ನು ಗಮನಿಸದೆಯೆ, ಮಹಾದೇವಿ ನಾಯಕನನ್ನು ಹುಡುಕಿಕೊಂಡು ಹೊರಟಳು. ನಾಯಕ ಶೃಂಗಾರ ಗೃಹದಲ್ಲಿರಬಹುದೆಂದು ನಿರೀಕ್ಷಿಸಿ ಹೋದ ಮಹಾದೇವಿಯ ನಿರೀಕ್ಷೆ ನಿಷ್ಫಲವಾಯಿತು.

ಒಂದೊಂದು ಕ್ಷಣ ಕಳೆಯುತ್ತಿದ್ದಂತೆಲ್ಲಾ ಅವಳ ಆವೇಗ ಅತಿಯಾಗುತ್ತಿತ್ತು. ತಲೆ ಭಾರವಾಗುತ್ತಿತ್ತು.

"ಆ ಹುಡುಗಿಯನ್ನು ವಿಲಾಸಮಂದಿರದಿಂದ ಬಿಡಿಸಲೇಬೇಕು!"........

"ಆ ಹುಡುಗಿಯ ತಾಯಿಯ ಮನಸ್ಸನ್ನು ಸಂತೋಷಪಡಿಸಲೇಬೇಕು!"........

"ನಾನು ನೀಡಿರುವ ಅಭಯವನ್ನು ಸಾರ್ಥಕ್ಯ ಪಡಿಸಲೇಬೇಕು" ....

"ಅಂತೆಯೇ ನನ್ನ ಮಾತು ಉಳಿದು, ಅದಕ್ಕೆ ಬೆಲೆ ಬರಬೇಕು"........

-ಎಂದು ಮಹಾದೇವಿಯ ಮನಸ್ಸು ಒಂದೇಸಮನೆ ಮಿಡಿಯುತ್ತಿತ್ತು.

ಭವನದಲ್ಲೆಲ್ಲೂ ನಾಯಕ ಮಹಾದೇವಿಗೆ ಕಾಣದಿದ್ದುದರಿಂದ ಅವಳ ಮನಸ್ಸಿನ ಆತಂಕ ಅತಿಂರಾಗತೊಡಗಿತು. ಈ ವೇಳೆಗೆಲ್ಲಾ ನಾಯಕ ವಿಲಾಸಮಂದಿರಕ್ಕೆ ಹೋಗಿ, ಆ ಹುಡುಗಿಯ ಶೀಲಭಂಗದ ಪ್ರಯತ್ನದಲ್ಲಿರಬಹುದೆಂದು ಊಹಿಸಿದ ಮಹಾದೇವಿ, ತನ್ನ ಕಾರ್ಯ ಚಟುವಟಿಕೆಗೆ, ಪಾದರಸದಂತಹ ಉತ್ಸಾಹವನ್ನು ಆಹ್ವಾನಿಸಿಕೊಂಡು, ತಡಮಾಡದೆ ನಾಯಕನ ವಿಲಾಸಮಂದಿರದ

ಕಡೆಗೆ ವೇಗವಾಗಿ ಸಾಗಿದಳು.

ಅಪರೂಪವಾಗಿ ವಿಲಾಸಮಂದಿರಕ್ಕೆ ದಯಮಾಡಿಸಿದ ನಾಯಕನ ಧರ್ಮಪತ್ನಿ ಮಹಾದೇವಿಯನ್ನು ತಡೆಗಟ್ಟಲು ದ್ವಾರಸೇವಕರಿಗೆ ಸಾಮರ್ಥ್ಯ ಬರಲಿಲ್ಲ.

-ಮಹಾದೇವಿ ನೇರವಾಗಿ ವಿಲಾಸಮಂದಿರದ ವಿಶಾಲ ಹಜಾರದಲ್ಲಿ ಬಂದು ನಿಂತಳು.

ಅದುವರೆವಿಗೂ ಮಹಾದೇವಿ ಆ ವಿಲಾಸಮಂದಿರವನ್ನೇ ನೋಡಿರಲಿಲ್ಲ. ಅಂದರೆ ವಿಲಾಸಮಂದಿರದ ಸ್ತ್ರೀಯರ ಬಗೆಗೆ ಅವಳು ತಾತ್ಸಾರ ಮನೋಭಾವವನ್ನು ಹೊಂದಿದ್ದಳೆಂದಲ್ಲ. ನಾಯಕನ ಬಲಾತ್ಕಾರದಿಂದ ಶೀಲವನ್ನು ಕಳೆದುಕೊಂಡುಬಿಟ್ಟಿದ್ದ ಆ ವನಿತೆಯರ ಬಾಳು ಮತ್ತೆ ಸರಿಹೋಗುವಹಾಗೆ ಮಾಡಲು ತಾನು ಅಸಮರ್ಥಳಾದುದರಿಂದಲೇ ಮಹಾದೇವಿ ಆ ವನಿತೆಯರ ಬಗೆಗೆ ತಾಟಸ್ಥ್ಯಮನೋಭಾವವನ್ನು ತಳೆದಿದ್ದಳು.

ವಿಲಾಸಮಂದಿರದ ಹಜಾರದಲ್ಲಿ ಬಂದು ನಿಂತ ಆಕೆ ಒಮ್ಮೆ ಸುತ್ತಲೂ ತಿರುಗಿ ನೋಡಿದಳು. ಅವಳು ನೋಡಿದ ಕಡೆಯಲ್ಲೆಲ್ಲಾ ಒಂದೊಂದು ಸಾಲಂಕೃತ

ಪ್ರತ್ಯೇಕ ಪ್ರತ್ಯೇಕವಾದ ಕೋಣೆಗಳಿದ್ದುವು.

ಅಲ್ಲಿದ್ದ ಕೋಣೆಗಳೊಂದರಿಂದ ಯಾರೋ ಬಿಕ್ಕಿ ಬಿಕ್ಕಿ ಅಳುತ್ತಿರುವ ಸದ್ದು ಮಹಾದೇವಿಯ ಕಿವಿಗೆ ಕೇಳಿ ಬಂತು. ಎಂತಲೇ ಅವಳು ಆ ದಿಕ್ಕಿಗೆ ಆಕರ್ಷಿಕಳಾದಳು.

ಅಷ್ಟದಲ್ಲಿ ನಾಲ್ಕಾರು ಹೆಂಗಸರು ಮಹಾದೇವಿಯನ್ನು ಸುತ್ತುಗಟ್ಟಿ ನಿಂತಿದ್ದರು. ಮಹಾದೇವಿ ಅವರ ಮುಖಗಳನ್ನೆಲ್ಲಾ ನೋಡಿದಳು. ಅವರೆಲ್ಲರ ಮುಖಗಳೂ ಕಳಾಹೀನವಾಗಿ, ನಿಸ್ತೇಜವಾಗಿದ್ದವು. ಮಹಾದೇವಿ ನೋಡಿದ ಒಂದೊಂದು ಮುಖವೂ ಒಂದೊಂದು ಕರುಣ ಕಥೆಯನ್ನು ಹೇಳುತ್ತಿದ್ದವು. ನಾಯಕನ ಅಂಧವಾದ ಕಾಮಕ್ಕೆ ಬಲಿಬಿದ್ದ ಪತಿತೆಯರು ಇವರೇ ಇರಬೇಕೆಂದು ಕೊಂಡಳು, ಮಹಾದೇವಿ.

ವಿಲಾಸಮಂದಿರದ ಆ ವನಿತೆಯರಾರಿಗೂ ತಾವೇ ಮೊದಲು ಮಹಾರಾಣಿಯನ್ನು ಮಾತನಾಡಿಸುವ ಎದೆಗಾರಿಕೆ ಕಾಣಲಿಲ್ಲ. ಆಂದರೆ ಮಹಾದೇವಿ ನಾಯಕ ನಂತೆಯೇ ಕಾಠಿಣ್ಯಸ್ವಭಾವದವಳೆಂದು ಅವರ ಅಭಿ

ಪ್ರಾಯವಾಗಿರಲಿಲ್ಲ. ಆದರೆ ಮಹಾದೇವಿಯ ಆ ಹೊತ್ತಿನ ಮುಖ, ಅವರುಗಳಿಗೆ ಭಯ ಬರಿಸಿತ್ತು.

"ನಾಯಕರಿನ್ನೂ ಇಲ್ಲಿಗೆ ಬಂದಿಲ್ಲವೆ ?"

—ಸಾಮೂಹಿಕವಾಗಿ ಕೇಳಿದಳು ಮಹಾದೇವಿ.

"ಇನ್ನೂ ಬಂದಿಲ್ಲ ತಾಯಿ"

—ಯಾವುದೋ ನೊಂದ ಎಳೆಯ ಕಂಠ ಉತ್ತರಿಸಿತು.

"ಇದು, ಇಲ್ಲಿಗೆ ನಾಯಕರು ಬರುವ ವೇಳೆಯೆ?"

"ಇನ್ನೂ ಒಂದು ತಾಸು ಹೊತ್ತು ಹಿಡಿಯಬಹುದು"

—ಯಾವುದೋ ಜಿಗುಪ್ಸೆಭರಿತ ಕಂಠ ಧ್ವನಿಸಿತು.

"ಇಂದು ಇಲ್ಲಿಗೆ ನಾಯಕರು ಹೊಸದಾಗಿ ಹಿಡಿದು ತಂದಿರುವ ಹುಡುಗಿ ಎಲ್ಲಿದ್ದಾಳೆ?"

—ಮಹಾದೇವಿಯ ಈ ಪ್ರಶ್ನೆ, ಆ ವನಿತೆಯರೆಲ್ಲಾ ಒಬ್ಬರನ್ನೊಬ್ಬರು ನೋಡಿಕೊಳ್ಳುವಂತೆ ಮಾಡಿತು. ಉತ್ತರ ಬರಲು ತಡವಾಯಿತು.

ಮಹಾದೇವಿ ಮತ್ತೆ ಅದೇ ಪ್ರಶ್ನೆಯನ್ನು ಸ್ವಲ್ಪ ದೊಡ್ಡ ಧ್ವನಿಮಾಡಿ ಕೇಳಿದಳು.

"ಆ ಕೋಣೆಯಲ್ಲಿದ್ದಾಳೆ"

—ಎಂದು ಒಂದು ಧೈರ್ಯವಾದ ಕಂಠ ಉತ್ತರಿಸಿ, ಆ ಹೊಸ ಹುಡುಗಿಯಿದ್ದ ಕೋಣೆಯತ್ತ ಕೈತೋರಿಸಿತು.

ಮಹಾದೇವಿ ಆ ಕೋಣೆಯ ಬಳಿಗೆ ಹೋಗಿ ಬಾಗಿಲಿನಲ್ಲಿ ನಿಂತಳು. ಒಂದು ಮನೋಹರವಾದ ಯೌವನದ ಹೆಣ್ಣು ಬಿಕ್ಕಳಿಸಿ ಅಳುತ್ತಾ ಆ ಕೋಣೆಯೊಂದರ ಪೀಠದ ಮೇಲೆ ಕುಳಿತಿದೆ. ಇಬ್ಬರು ಸ್ತ್ರೀ ಪರಿಚಾರಕರು ಆ ಹುಡುಗಿಗೆ ಶೃಂಗಾರ ಮಾಡುತ್ತಿದ್ದಾರೆ.

ಈ ದೃಶ್ಯವನ್ನು ನೋಡಿದ ಮಹಾದೇವಿಯ ಕೋಪದ ಕಟ್ಟೆ ಒಡೆದುಹೋಯಿತು. ಏನನ್ನೂ ಲಕ್ಷಿಸದೆ ನೇರವಾಗಿ ಆ ಕೋಣೆಯೊಳಕ್ಕೆ ನುಗ್ಗಿದ ಮಹಾದೇವಿ, ಶೃಂಗಾರ ಮಾಡುತ್ತಿದ್ದ ದಾಸಿಯರನ್ನು ಬದಿಗೆ ತಳ್ಳಿ ಆ ಹುಡುಗಿಯ ಭುಜ ಹಿಡಿದು ಮೇಲೆತ್ತಿ ನಿಲ್ಲಿಸಿದಳು.

—ನಿಜಕ್ಕೂ ಆ ಹುಡುಗಿ ಮುದ್ದಾಗಿ ಮೋಹಕವಾಗಿದ್ದಳು.

ವಿಲಾಸಮಂದಿರದ ಮಿಕ್ಕ ವನಿತೆಯರು ಆ ಕೋಣೆ

ಯ ಬಾಗಿಲಿನಲ್ಲೇ ನಿಂತು ಮಹಾದೇವಿ ಏತಕ್ಕೆ ಇಲ್ಲಿ ಬಂದಿರುವಳೊ, ಏನು ಮಾಡುವಳೊ ಎಂದು ತಿಳಿದು ಕೊಳ್ಳಲು ಕಾತುರರಾಗಿ ನಿಂತಿದ್ದರು.

ಮಹಾದೇವಿ, ಆ ಹುಡುಗಿಗೆ ಮಾಡಿದ್ದ ಶೃಂಗಾರ ವನ್ನೆಲ್ಲಾ ಕೆಡಿಸಿದಳು. ಅವಳನ್ನು ಅಪ್ಪಿಕೊಂಡು ಮುದ್ದಾಡಿಬಿಟ್ಟಳು.

ಆ ಹುಡುಗಿಗೆ ಮಹಾದೇವಿಯ ಈ ವರ್ತನೆ ಅರ್ಥ ವಾಗದೆ, ಬೆರಗಾಗಿ ನಿಂತಿದ್ದಳು.

"ನಿನ್ನನ್ನು ಈ ನರಕದಿಂದ ಬಿಡುಗಡೆ ಮಾಡಲು ನಾನು ಬಂದಿದ್ದೇನೆ ಅಣ್ಣಾಗಿ. ನಿನಗಿನ್ನು ಭಯವಿಲ್ಲ. ಧೈರ್ಯವಾಗಿ ನನ್ನನ್ನೆ ಹಿಂಬಾಲಿಸಿಕೊಂಡು ಬಾ"

—ಎಂದು ಆ ಹುಡುಗಿಯ ಕೈಯನ್ನು ಹಿಡಿದು ಕೊಂಡು ಮಹಾದೇವಿ ಆ ಕೋಣೆಯೊಳಗಿನಿಂದ ಹೊರ ಬಂದಳು.

—ಈ ನೋಟ ಎಲ್ಲರಿಗೂ ಸನಾಡದಂತೆ ಗೋಚರಿಸು ತ್ತಿತ್ತು.

ಆ ಹುಡುಗಿಯ ಕೈಯನ್ನು ಹಿಡಿದುಕೊಂಡ ಮಹಾದೇವಿ ಮತ್ತಾರ ಬಳಿಯೂ ಮಾತನಾಡದೆ, ವಿಲಾಸ ಮಂದಿರದ ಹೆಬ್ಬಾಗಿಲ ಬಳಿ ಬಂದಳು.

ಆ ಹುಡುಗಿಯನ್ನು ಕರೆದುಕೊಂಡು ಹೊರಟಿದ್ದ ಮಹಾದೇವಿಗೆ ದ್ವಾರಸೇವಕ ಅಡ್ಡಹಾಕಿ, ಅವರನ್ನು ತಡೆದ.

"ಈಗ ನೀನು ನನ್ನನ್ನು ತಡೆದರೆ, ನಾಯಕರ ಆಜ್ಞೆಯನ್ನು ಉಲ್ಲಂಘಿಸಿದಂತಾಗುತ್ತದೆ. ನನ್ನ ಈ ಕಾರ್ಯಕ್ಕೆ ನಾಯಕರ ಅನುಮತಿ ದೊರೆತಿದೆ. ಇದನ್ನು ನೀನು ತಿಳಿದುಕೊಂಡೂ ನನ್ನನ್ನು ತಡೆಯುವುದಾದರೆ, ಇನ್ನು ಅರ್ಧತಾಸಿನಲ್ಲಿ ನಿನ್ನ ರುಂಡ, ನಿನ್ನ ದೇಹದಿಂದ ಬೇರ್ಪಟ್ಟು ಹೋಗುವುದು ಖಂಡಿತ."

–ಮಹಾದೇವಿಯ ಈ ಮಾತು, ಸೇವಕನಿಂದ ದಾರಿಯನ್ನು ಬಿಡಿಸಿತು.

ಮಹಾದೇವಿ ಆ ಬಂಧಿಸಲ್ಪಟ್ಟಿದ್ದ ಅಣುಗಿಯನ್ನು ಬಿಡಿಸಿಕೊಂಡು, ವಿಲಾಸಮಂದಿರದಿಂದ ಹೊರಕ್ಕೆ ಬಂದಳು.

ಅಲ್ಲಿದ್ದ ಸೇವಕನಿಗೆ ಗಾಡಿಯನ್ನು ತರುವಂತೆ ಹೇಳಿ. ನಂತರ ಸಿದ್ಧವಾಗಿ ಬಂದ ಗಾಡಿಯಲ್ಲಿ ಮಹಾದೇವಿ ಆ ಹುಡುಗಿಯನ್ನೂ ಕೂಡಿಸಿಕೊಂಡು ಹೊರಟು, ಆ ಹುಡುಗಿಯನ್ನು ಅವಳ ಮನೆಗೆ ಕರೆದುಕೊಂಡು ಹೋಗಿ ಬಿಟ್ಟು, ಅವಳ ತಾಯಿಗೆ ಕೊಟ್ಟಿದ್ದ ತನ್ನ ವಚನವನ್ನು ಉಳಿಸಿಕೊಂಡಳು.

೭

ತಾನು ಹಿಡಿದು ತರಿಸಿದ ಹೊಸ ಹಕ್ಕಿ, ಮಹಾದೇವಿ
ಯಿಂದ ತಪ್ಪಿಸಿಕೊಂಡು ಹೋದುದನ್ನು, ವಿಲಾಸಮಂದಿರ
ಲ್ಲಿ ತಿಳಿದುಕೊಂಡ ರುದ್ರನಾಯಕ ರುದ್ರನಾದ.

ಮಹಾದೇವಿ ಇಷ್ಟುದೂರ ಬಂದುದಕ್ಕೆ ಕೋಪದಿಂದ
ವನ ಹಲ್ಲುಗಳು ಕಡಿಯುತ್ತಿದ್ದವು. ಅವನ ಎರಡು
ುಬ್ಬುಗಳೂ ಸಂಧಿಸಿ ಮಸೆಯುತ್ತಿದ್ದವು. ಅವನ ಮುಖ
ಪ್ರಚಂಡವಾದ ಕೋಪದ ಹೊಂಡವಾಗಿತ್ತು.

ಈ ಬಾರಿ ತನ್ನ ಹೆಂಡತಿಗೆ ಸರಿಯಾದ ಬುದ್ಧಿ ಕಲಿಸ
ಬೇಕೆಂದು ಸಂಕಲ್ಪಿಸಿದ ನಾಯಕ, ವಿಲಾಸಮಂದಿರದಲ್ಲಿ
ಉಳಿಯದೆ ತನ್ನ ಭವನಕ್ಕೆ ಬಂದುಬಿಟ್ಟ.

—ಮಹಲಿಗೆ ಮಹಾದೇವಿಯಿನ್ನೂ ಬಂದಿರಲಿಲ್ಲ.

—ನಾಯಕ ಶತಪಥ ತುಳಿಯುತ್ತಾ ಅವಳಿಗಾಗಿ
ಕಾಯುತ್ತಿದ್ದ.

ಸ್ವಲ್ಪ ಹೊತ್ತಿನ ನಂತರ ಮಹಾದೇವಿ ಮಹಲಿಗೆ ಬಂದು, ನಾಯಕನಿಗೆ ಕಾಣಿಸಿಕೊಂಡಳು. ನಾಯಕನ ಪರಿಸ್ಥಿತಿ ಎಂತಹ ಮಟ್ಟಕ್ಕೇರಿರುತ್ತದೆಂದು ಅವಳು ಮೊ ದಲೇ ಊಹಿಸಿಕೊಂಡಿದ್ದಳು. ಎಂತಲೇ ನಾಯಕನನ್ನು ಕಂಡೊಡನೆ ಅವಳಿಗೆ ಭಯವಾವರಿಸಲಿಲ್ಲ.

"ಮಹಾದೇವಿ—"

—ಹೆಂಡತಿಯನ್ನು ಕಂಡೊಡನೆ ನಾಯಕ ಬಹು ಭೀಕರವಾಗಿ ಕರೆದ.

ಮಹಾದೇವಿ ಏನೂ ಮಾತನಾಡದೆ ಅವನ ಮುಂದೆ ಬಂದು ನಿಂತಳು.

"ಈ ಪ್ರಾಂತ್ಯದ ಪಾಳೆಯಗಾರ ನಾನೋ. ನೀನೋ?"

—ಮುಂದಿನ ಘಟನೆಗೆ ಮುನ್ನುಡಿಯಾಗಿತ್ತು ನಾಯ ಕನ ಈ ನುಡಿ.

"ಅಧಿಕೃತವಾಗಿ ನೀವೇ ಪಾಳೆಯಗಾರರು"

—ಅರ್ಥಪೂರ್ಣವಾಗಿ ಹೇಳಿದಳು ಮಹಾದೇವಿ.

"ಹಾಗಾದರೆ ಅನಧಿಕೃತವಾಗಿ ನೀನು ಪಾಳೆಯ ಗಾರಳೇನು?"

“ಇಲ್ಲ. ಅಧರ್ಮದ ಕಾರ್ಯವನ್ನು ಪಾಳೆಯಗಾರರು
ಡಿದರೆ, ಧರ್ಮಸಮ್ಮತವಾದ ಕೆಲಸವನ್ನು ಯಾರು
ಾದರೂ ಮಾಡಬಹುದು.”

“ಏನೇ ಆಗಲಿ, ನೀನು ನನಗೆ ಅವಮಾನ ಮಾಡಿದ್ದಿ”

“ಇಲ್ಲ, ನಿಮ್ಮನ್ನು ಅವಮಾನದಿಂದ ರಕ್ಷಿಸಿದೆ.”

“ನಿನ್ನ ಪಾಂಡಿತ್ಯ ಪ್ರದರ್ಶನ ನನಗೆ ಅಕ್ಕರೆಯಿಲ್ಲ.
ು ಒಂದು ಹೇಯವಾದ ಕಾರ್ಯವನ್ನು, ನನಗೆ ಮೋಸ
ಡಿ ಮಾಡಿರುವಿ. ಅದರ ತಪ್ಪನ್ನೀಗ ನೀನು ಒಪ್ಪಿ
ಂಡು, ನನ್ನ ಕ್ಷಮೆ ಯಾಚಿಸಿದರೆ ನಿನ್ನ ಸ್ಥಿತಿ ನೆಟ್ಟ
ೀತು”

“ಇಲ್ಲವಾದರೆ.........”

“ಅದು ಮುಂದಿನ ಮಾತು.”

“ನಿಮ್ಮನು ಕ್ಷಮೆ ಯಾಚಿಸುವಂತಹ ಮಹಾಪರಾಧ
ೀನೂ ನಾನು ಮಾಡಿಲ್ಲ”

“ಮಹಾದೇವಿ, ನೀನು ಅಪರಾಧಿ.”

“ಅಪರಾಧಿ ನಾನಲ್ಲ; ನೀವು.”

ಮಾಡಿರುವ ಅಪರಾಧವನ್ನು ಮುಚ್ಚಿಡುವ ಯತ್ನ

ನಡೆಸಿದರೆ ಶಿಕ್ಷೆ ಉಗ್ರವಾದೀತು."

"ಶಿಕ್ಷೆ! ಯಾರಿಗೆ? ಏತಕ್ಕಾಗಿ?"

"ಹೌದು, ನಿನಗೆ ಶಿಕ್ಷೆ. ನಾನು ತಂದ ಪದಾರ್ಥ
ವನ್ನು, ಒಡೆಯನ ಅಪ್ಪಣೆಯಿಲ್ಲದೆಯೆ ಅಪಹರಿಸಿದು
ಕ್ಕಾಗಿ ನಿನಗೆ ಶಿಕ್ಷೆ."

"ಹಾಗಾದರೆ ನನಗಿಂತ ಮೊದಲು ನಿಮಗೆ ಶಿಕ್ಷೆಯಾ
ಬೇಕಲ್ಲವೆ? ಆಕೆಯನ್ನು ನೀವು ಹಿಡಿದು ತರಿಸುವುದಕ್ಕಾ
ಮೊದಲು ನಿಮಗೇ ಶಿಕ್ಷೆಯಾಗಬೇಕಲ್ಲವೆ?"

"ನಾನು ಪಾಳೆಯಗಾರ; ಈ ಪ್ರಾಂತ್ಯದ ಅಧಿಪತಿ

"ಆದರೆ ಧರ್ಮದ ಸಮ್ಮುಖದಲ್ಲಿ ನೀವೂ ಕೂ
ಕೇವಲ ಒಬ್ಬ ಮನುಷ್ಯರು. ನೀವು ಏನೇ ಆಗಿದ್ದ
ಧರ್ಮದಿಂದ ಹೊರಗಾಗಲಾರಿರಿ. ಅದಕ್ಕೆ ನಿಮ
ಶಿಕ್ಷೆಯಾಗಬೇಕೆಂದಿದ್ದು."

"ನೀನು ನನ್ನ ಹೆಂಡತಿ. ನನ್ನ ಅಧೀನಳು ನೀನು

"ಇರಬಹುದು. ಆದರೆ ನನ್ನ ಧರ್ಮಾಧರ್ಮ ವಿ
ಚನೆಯ ಪ್ರಭು ನೀವಲ್ಲ."

"ನಿನ್ನೊಂದಿಗೆ ನನಗೆ ವ್ಯಥಾ ಮಾತು-ಕತೆ ಬೇ

ಾಡಿರುವ ಅಪರಾಧವನ್ನು ಒಪ್ಪಿಕೊಂಡು ಕ್ಷಮೆ ಕೇಳಿ
ರೆ ನನ್ನ ಕೋಪ ಶಾಂತವಾದೀತು."

"ನಾನು ಅಪರಾಧಿಯೂ ಅಲ್ಲ; ನಿಮ್ಮಲ್ಲಿ ಕ್ಷಮಾ
ಕ್ಷೆಯನ್ನೂ ಬೇಡುವುದಿಲ್ಲ."

"ಹಾಗಾದರೆ ನಿನ್ನ ಪಾಲಿಗೆ, ಶಿಕ್ಷೆ ಶತಸಿದ್ಧ."

"ನಿಮಗೆ, ನಿಮ್ಮ ಶೀರ್ಷಿಗೆ, ನಿಮ್ಮ ನ್ಯಾಯಕ್ಕೆ ನನ್ನ
ಸ್ಕಾರ."

"ಮಹಾದೇವಿ, ನೀನೀಗ ನನ್ನ ಸತಿಯಲ್ಲ, ಸೆರೆಯಾಳು"

"ನಿಮ್ಮ ಮೂರ್ಖತನವನ್ನು ಪ್ರದರ್ಶಿಸುತ್ತಿದೆ ಈ
ಳಿಕೆ."

"ಹೀಗೆ ಮಾತನಾಡಿದರೆ ನೀನು ತಪ್ಪಿಸಿಕೊಳ್ಳಲಾರೆ."

"ತಪ್ಪಿಸಿಕೊಳ್ಳಬೇಕೆಂಬ ಅಭಿಲಾಷೆಯೇ ನನಗಿಲ್ಲ."

"ನಿನ್ನನ್ನು ಕ್ಷಮಿಸಿ, ಉಳಿಸಬೇಕೆಂಬ ಅಭಿಪ್ರಾಯವೂ
ಗಿಲ್ಲ."

"ಧರ್ಮಿಷ್ಠಳಾದ ಹೆಂಡತಿಯನ್ನು ವಿನಾಃಕಾರಣ ಶಿಕ್ಷಿ
ಘೋರ ಅಪರಾಧ ನಿಮ್ಮ ತಲೆಗೆ ಕಟ್ಟುತ್ತದೆ."

"ಪ್ರತಿಕೂಲ ಸತಿಯನ್ನು ದಂಡಿಸುವುದರಿಂದ ಯಾವ
ಪವೂ ತಟ್ಟಲಾರದು."

"ವಿನೇಚನಾಶೂನ್ಯರೊಂದಿಗೆ ನಾನಿನ್ನು ಮಾತನಾ
ಲಾರೆ"

"ಅಪರಾಧಿಯೊಂದಿಗೆ ಜೇಡದ ಹರಟೆ ಕೊಚ್ಚುತ್ತಾ
ನಾನೂ ಇನ್ನು ಕಾಯಲಾರೆ."

"ನನಗೇನು ಶಿಕ್ಷೆ?"

"ಆಜೀವಪರ್ಯಂತ ಕಾರಾಗೃಹವಾಸ."

"ಮಹಾಪ್ರಸಾದ."

2

ಅಣುಗಿಯೊಬ್ಬಳ ಶೀಲಭಂಗವನ್ನು ತಪ್ಪಿಸಿದ ಮ
ದೇವಿಗೆ ದೊರೆತ ಬಳುವಳಿ—ಸೆರೆಮನೆ.

ಗಂಡನ ಅಕಾರ್ಯವನ್ನು ನೇರವಾಡಲು ಯತ್ನಿ
ಜಯಗಳಿಸಿದ ಮಹಾದೇವಿಗೆ ಕಾದಿತ್ತು—ಬಂದೀಖಾ

ಮಗಳನ್ನು ಕಳೆದುಕೊಂಡ ತಾಯಿಯ ಅಳ
ಓಗೊಟ್ಟುದುದರ ಪ್ರತಿಫಲ—ತುರಂಗವಾಸ.

ಗಂಡನ ಧೂರ್ತತನವನ್ನು ಹತ್ತಿಕ್ಕಹೊರಟ ಸಾ
ಸತಿಗೆ, ಪರಿಸ್ಥಿತಿ ಹಾಕಿದ ಹೂನಮಾಲೆ—ಕಾರಾಗೃಹ.

—ನಾಯಕ ತನ್ನ ಸತಿಯನ್ನು ಸೆರೆಮನೆಗೆ ಹಾಕಿದ್ದ.
ನಾಯಕನ ದೃಷ್ಟಿಯಲ್ಲಿ ಮಹಾದೇವಿ ಮಹಾಪರಾಧಿ
ಯಾಗಿದ್ದಳು. ಅಪರಾಧಿಯಾರಾದರೇನು ಅತ ಶಿಕ್ಷಾರ್ಹ.
ದಕ್ಕೆ ಅಪರಾಧಿ ತನ್ನ ಹೆಂಡತಿಯಲ್ಲಿದ್ದರೂ ನಾಯಕ
ವಳನ್ನು ಶಿಕ್ಷಿಸಿದ್ದ. ಹೀಗಿತ್ತು ನಾಯಕನ ವಿವೇಚನೆ.
—ನಾಯಕನ ಈ ವಿವೇಚನೆಗೆ ಸೆರೆಮನೆಯಲ್ಲಿದ್ದ
ಮಹಾದೇವಿ ನಗುತ್ತಿದ್ದಳು.
ನಾಯಕನ ಧರ್ಮಾಧರ್ಮ ವಿವೇಚನೆಗಾಗಿ ಅವಳ
ಗುನಗುತ್ತಲೆ ಸೆರೆಯ ಸುಖವನ್ನು ಸವಿಯುತ್ತಿದ್ದಳು....

೮

ರುದ್ರನಾಯಕ, ಮಹಾದೇವಿಯನ್ನು ಸೆರೆಮನೆಗೆ
ಹಾಕಿ ಒಂದು ತಿಂಗಳು ಕಳೆದಿತ್ತು.
ಪ್ರಚಂಡವಾದ ಸಮಸ್ಯೆಯೊಂದರಿಂದ ತನ್ನ ತಲೆ
ಯನ್ನು ಕೆಡಿಸಿಕೊಂಡಿದ್ದ ನಾಯಕ, ಸಪ್ಪಗಾಗಿ ಯೋಚಿ
ಸುತ್ತಾ ಕುಳಿತಿದ್ದ. ನಾಯಕನ ಆಡಳಿತದ ರಾಜಕೀಯ
ಕ್ಕೆ ಕಠಿಣವಾದ ಪರಿಸ್ಥಿತಿಯೊಂದು ಅವನ ಎದುರಾ

ಗಿತ್ತು. ಆ ಪ್ರಾಂತ್ಯದ ಪಾಳೆಯಗಾರನಾದ ಅವನ
ಅದನ್ನು ಎದುರಿಸಿ, ಸುಧಾರಿಸಲೇ ಬೇಕಾಗಿತ್ತು.

ಶಿವನಸಮುದ್ರದ ಕಡೆಯ ಹಿರಿಯ ಪಾಳೆಯಗಾ
ನಾದ ದಂಡನಾಯಕ, ರುದ್ರನಾಯಕನನ್ನು ಸೋಲಿಸಿ
ನಾಯಕಪುರಧ ಪಾಳೆಯಪಟ್ಟನ್ನು ತನ್ನ ಪ್ರಾಂತ್ಯಕ
ಸೇರಿಸಿಕೊಳ್ಳಬೇಕೆಂದು ತನ್ನ ಸೈನ್ಯ ಸಮೇತವಾ
ಹೊರಟಿರುವನೆಂಬ ಸುದ್ದಿಯನ್ನು ತಿಳಿದೇ, ರು
ನಾಯಕ ತಲೆಕೆಡಿಸಿಕೊಂಡು ಯೋಚಿಸುತ್ತಿದ್ದ.

ನಾಯಕನ ಸಚಿವರುಗಳಾದ ವಿಜಯ, ವಾಮನರ
ನಾಯಕನ ಬಳಿ ಕುಳಿತಿದ್ದರು.

ಹೆಚ್ಚುಕಡಿಮೆ ವಾಮನನಾಯಕ ವಿಷಯಾಸಕ್ತ
ನನ್ನು ಸಚಿವನಾಗಿದ್ದುದರಿಂದ, ರಾಜಕೀಯ ವಿಚಾರದ
ಅವನ ಆಲೋಚನೆ ಅಷ್ಟು ಸೂಕ್ತವಲ್ಲವೆಂಬುದು
ನಿಗೂ ತಿಳಿದಿತ್ತು; ನಾಯಕನಿಗೂ ಗೊತ್ತಿತ್ತು.

ಈಗ ವಿಜಯನೊಬ್ಬನೇ, ನಾಯಕನ ಆಲೋಚ
ಗಳಿಗೆ ನೆರವಾಗಬೇಕಾಗಿದ್ದವನು. ಆ ಸಭೆಗೆ ವಾವ
ನೆಪಕ್ಕೆ ಮಾತ್ರ.

ರುದ್ರನಾಯಕನ ಮೇಲೆ ಸಮರಕ್ಕೆ ಬರಲಿದ್ದ ದಂಡನಾಯಕನ ದಂಡು ಅದ್ಭುತವಾಗಿತ್ತು. ಮೇಲಾಗಿ ಆತ ಪ್ರಜಾಪ್ರಿಯನೂ ಆಗಿದ್ದುದರಿಂದ ಇಡೀ ಪ್ರಜಾಸ್ತೋಮ ಸೈನ್ಯದಂತಿತ್ತು.

ಆದರೆ ನಾಯಕಪುರದ ರುದ್ರನಾಯಕನಲ್ಲಿ ಅಷ್ಟು ಸೈನ್ಯವೂ ಇರಲಿಲ್ಲ. ಪ್ರಜೆಗಳ ನೆರವೂ ಇರಲಿಲ್ಲ.

—ಎಂತಲೇ ಈಗ ನಾಯಕ ಯೋಚನಾಗ್ರಸ್ತನಾಗಿದ್ದಾನೆ.

ದಂಡನಾಯಕನ ಮುಂದೆ ತಾವು ನಿಂತರೆ ತಲ್ಲಣಿಸಿ ಹೋಗುವೆವೆಂಬ ವಿಚಾರ ನಾಯಕನಿಗೆ ಸುಸ್ಪಷ್ಟವಾಗಿತ್ತು

—ಆಗ ನಾಯಕನಿಗಿದ್ದ ದಾರಿಗಳೆಂದರೆ,

—ಸಮರಕ್ಕೆ ನಿಂತು, ಸೋತು, ತನ್ನ ಪಾಳೆಯಪಟ್ಟನ್ನು ದಂಡನಾಯಕನಿಗೆ ಒಪ್ಪಿಸಿಬಿಡಬೇಕು......

ಇಲ್ಲವೆ—

ದಂಡನಾಯಕನೊಂದಿಗೆ ಸಂಧಿ ಮಾಡಿಕೊಂಡು, ಅವನು ಕೇಳುವಷ್ಟು ಹಣವನ್ನು ಕೊಡಲೊಪ್ಪಬೇಕು.

—ಇದು ಬಿಟ್ಟು ನಾಯಕನಿಗೆ ಆ ವೇಳೆಯಲ್ಲಿ ಬೇರೆ ಮಾರ್ಗವೇ ಇರಲಿಲ್ಲ.

ದಂಡನಾಯಕನೊಡನೆ ಸಂಧಿ ಮಾಡಿಕೊಂಡು ಬೀಸುವ ದೊಣ್ಣೆಯೇಟನ್ನು ತಪ್ಪಿಸಿಕೊಳ್ಳುವುದೇ ಉಚಿತವೆಂದು ನಿರ್ಧರಗೊಂಡ ನಾಯಕ, ಶತ್ರುಸೈನ್ಯ ನಾಯಕಪುರವನ್ನು ಸಮೀಪಿಸುವುದನ್ನೇ ಕಾದು ಕುಳಿತ.

ಇದೇ ವೇಳೆಯಲ್ಲಿ, ನಾಯಕನ ಮನಸ್ಸು ಸತಿಯ ಸಾನಿಧ್ಯ ಸಾಮೀಪ್ಯಗಳನ್ನು ಕೋರಿದ್ದರಿಂದ, ರುದ್ರನಾಯಕ ಮಹಾದೇವಿಯನ್ನು ಸೆರೆಮನೆಯಿಂದ ಬಿಡುಗಡೆ ಮಾಡಿದ.

ಮಹಾದೇವಿ ಮತ್ತೆ ನಾಯಕನ ಮಹಲನ್ನು ಸೇರಿದಳು.

೯

ಶತ್ರುಸೈನ್ಯ ನಾಯಕಪುರಕ್ಕೆ ಇನ್ನೂ ನಾಲ್ಕಾರು ಮೈಲಿಗಳ ಹಿಂದೆ ಇರುವಂತೆಯೇ, ರುದ್ರನಾಯಕನ ರಾಜಕೀಯ ಸಚಿವ ವಿಜಯ ಸಂಧಿಯ ರಾಯಭಾರವನ್ನು ಹೊತ್ತು ದಂಡನಾಯಕನನ್ನು ಎದುರುಗೊಳ್ಳಲು ಊರ ಹೊರಗೆ ಬಿಡಾರ ಮಾಡಿದ.

ಒಂದು ದಿನದ ನಂತರ ಶತ್ರುಸೈನ್ಯ ನಾಯಕಪುರದ್ವಾರದ ಬಳಿ ಬಂದು, ಮೊದಲು ವಿಜಯನ ಬಿಡಾರವನ್ನು ಮುಟ್ಟಿತು.

ವಿಜಯ, ದಂಡನಾಯಕನ ಬಳಿ ಹೋಗಿ ತಾವು ಸಮರಕ್ಕಿಂತಲೂ ಸಂಧಿಯಲ್ಲಿ ಹೆಚ್ಚು ಆಸಕ್ತರಾಗಿರುವ ಸಂಗತಿಯನ್ನು ತಿಳಿಸಿದ.

ಮೊದಲು ದಂಡನಾಯಕ ಸಂಧಿಗೆ ಒಪ್ಪಲೇ ಇಲ್ಲ ಇದರಿಂದ ವಿಜಯ ತನ್ನ ಮಾತಿನ ಚಾಕಚಕ್ಯತೆಯನ್ನೆಲ್ಲಾ ಉಪಯೋಗಿಸಬೇಕಾಯಿತು.

—ನಂತರ ದಂಡನಾಯಕ ಸಂಧಿಗೊಪ್ಪಿದ.

ನಾಯಕನ ಸಂಧಿ ನಿಯಮಗಳು ವಿಚಿತ್ರವಾಗಿತ್ತು.

—ರುದ್ರನಾಯಕ ತನಗೆ ಐದು ಮಣ ಚಿನ್ನವನ್ನು ತಂದೊಪ್ಪಿಸಬೇಕು!

—ಇದಕ್ಕೂ ಮುಖ್ಯವಾಗಿ ರುದ್ರನಾಯಕ ತನ್ನ ಧರ್ಮಪತ್ನಿಯಾದ ಮಹಾದೇವಿಯನ್ನು ತನಗೆ ಕೊಡಬೇಕು.

ಸಂಧಿಗಾಗಿ ದಂಡನಾಯಕ ಹಾಕಿದ ನಿಯಮಗಳಿವು!

ಸಂಧಿಯ ನಿಯಮಗಳನ್ನು ಕೇಳಿ ವಿಜಯ ಭೂಮಿಗಿಳಿದುಹೋದ.

ದಂಡನಾಯಕ ತನ್ನ ಸಂಧಿಯ ನಿಯಮಗಳನ್ನು ಬದಲಾಯಿಸುವಂತಿರಲಿಲ್ಲ.

ದಂಡನಾಯಕ ವಿಜಯನಿಗೆ ಹೇಳಿದ್ದ—

"ನಿಮಗೆ ಸಂಧಿ ಬೇಕಾಗಿದ್ದರೆ, ಇನ್ನೊಂದು ದಿನ ಮಾತ್ರ ಅವಕಾಶ ಕೊಡುತ್ತೇನೆ. ಅಷ್ಟರೊಳಗೆ ಐದು ಮಣ ಚಿನ್ನವನ್ನೂ, ಮಹಾದೇವಿಯನ್ನೂ ತಂದು ಒಪ್ಪಿಸಬೇಕು. ಇಲ್ಲವಾದರೆ ನಾಯಕನನ್ನು ಸೋಲಿಸಿ ಕೊಂದು ಹಾಕುವುದು ಮಾತ್ರವಲ್ಲದೆ, ಇಡೀ ಊರನ್ನೇ ಲೂಟಿ ಮಾಡಿ, ಸುಲಿದುಕೊಂಡುಹೋಗುವೆನು."

ತನ್ನ ಮಹಲಿನಲ್ಲಿ ರುದ್ರನಾಯಕ ಧರ್ಮಸಂಕಟಕ್ಕೊಳಗಾಗಿ ತಳಮಳಿಸುತ್ತಿದ್ದ.

ಶತ್ರುವಿಗೆ ಐದುಮಣ ಬಂಗಾರವನ್ನು ಬೇಕಾದರೆ ಕೊಡಲು ಸಿದ್ಧನಿದ್ದ.

ಆದರೆ—

ತಾನು ಕೈ ಹಿಡಿದು, ಅಗ್ನಿಸಾಕ್ಷಿಯಾಗಿ ಕಟ್ಟಿಕೊಂಡ ಧರ್ಮಪತ್ನಿಯನ್ನು ನಪುಂಸಕನಂತೆ ಕೊಡುವುದು ಸಾಧ್ಯವೆ ?

—ನಾಯಕನ ತಲೆ ಕಾದು ಕೆಂಪಾಗಿ ಹೋಗಿತ್ತು.

ಈಗ ರುದ್ರನಾಯಕನೆ ದಂಡನಾಯಕನ ಬಳಿ ಹೋಗಿ ತನ್ನ ಮಹಾದೇವಿಯ ಬದಲು ಬೇರೇನನ್ನಾದರೂ ಕೇಳುವಂತೆ ಪ್ರಾರ್ಥಿಸಿದ.

—ದಂಡನಾಯಕ ಅದಕ್ಕೊಪ್ಪಲಿಲ್ಲ; ಅವನದು ಉಕ್ಕಿನ ನಿರ್ಧಾರವಾಗಿತ್ತು.

ದಂಡನಾಯಕ ರುದ್ರನಾಯಕನಿಗೆ ಹೇಳಿದ—

"ಇದೊಂದು ರಾತ್ರಿಯ ಅವಧಿಯನ್ನು ಮಾತ್ರ ನಾನು

ಕೊಡುತ್ತೇನೆ. ಇದಕ್ಕೂ ಹೆಚ್ಚಾಗಿ, ಅಶಕ್ತನಂತೆ ನಿನ್ನ ಊರಿನ ಹೊರಗೆ ನಾನು ಇರಲಾರೆ. ನಾಳೆಯ ಸೂರ್ಯೋದಯಕ್ಕೆ ಮುನ್ನ ನೀನು ಐದು ಮಣ ಚಿನ್ನ ಮತ್ತು ನಿನ್ನ ಹೆಂಡತಿ ಮಹಾದೇವಿಯೊಂದಿಗೆ ಬಾರದಿದ್ದಲ್ಲಿ, ನಿನ್ನನ್ನು ಸೋಲಿಸಿ ಕೊಲ್ಲುವುದು ಮಾತ್ರವಲ್ಲದೆ, ಈ ಊರನ್ನೆಲ್ಲಾ ಲೂಟಿ ಮಾಡಿ ಸಂಗಡ ಇಲ್ಲಿಂದ ನೂರಾರು ಸುಂದರಿ ಸ್ತ್ರೀಯರನ್ನು ಅಪಹರಿಸಿಕೊಂಡು ಹೋಗುತ್ತೇನೆ. ಇದು ಖಡಾಖಂಡಿತ.”

* * * *

ಪಠಿಸಿದ ವಿಜಯಸಿಂಹ. ಶತ್ರು ಪಾಳೆಯಗಾರನು ಹಾಕಿದ ಸಂಧಿ ನಿಯಮಗಳನ್ನು ಕೇಳಿ ಮಹಾದೇವಿ ಕಿಲಕಿಲನೆ ನಗಲಾರಂಭಿಸಿದಳು.

ಇದನ್ನು ಕಂಡ ವಿಜಯ, ಹಾಗೂ ರುದ್ರನಾಯಕ ಬೆಕ್ಕಸಬೆರಗಾದರು!

“ಈ ಸಂದಿಗ್ಧ ಸನ್ನಿವೇಶ ನಿನಗೆ ಹಾಸ್ಯಮಯವಾಗಿ ಕಾಣುತ್ತಿದೆಯೆ ಮಹಾದೇವಿ”

—ನಾಯಕ ತನ್ನ ಹೆಂಡತಿಯನ್ನು ಕೇಳಿದ.

“ಇದು ನಿಜಕ್ಕೂ ಹಾಸ್ಯಾಸ್ಪದವಾದುದು. ಶತ್ರು

ಪಾಳೆಯಗಾರನಾದ ದಂಡನಾಯಕ ಸತ್ಯವಾಗಿಯೂ ಮೂರ್ಖ. ಈ ನಾಯಕಪುರದ ಸ್ತ್ರೀ ಸಮುದಾಯದಲ್ಲಿ, ನಾಡಿಗಾಗಿ, ಊರಿನ ರಕ್ಷಣೆಗಾಗಿ ತಮ್ಮ ಶೀಲವನ್ನು ಬಲಿಗೊಡುವಂತಹ ಸಮರ್ಥ ಸ್ತ್ರೀ ಇಲ್ಲವೆಂದೇ ಭಾವಿಸಿರುವಂತಿದೆ. ಕೈ ಹಿಡಿದ ಪತಿಯ ಹಿತಕ್ಕಾಗಿ, ಊರಿನ ಸಂರಕ್ಷಣೆಗಾಗಿ ಶೀಲತ್ಯಾಗ ಮಾಡುವ ಸೌಭಾಗ್ಯದ ಅವಕಾಶ ನನ್ನದಾಗುವುದಾದರೆ, ನಾನು ಬೇಡವೆನ್ನುವೆನೆ. ನನ್ನನ್ನು ಶತ್ರುವಿಗೆ ಅರ್ಪಿಸಿ, ಅವನ ಮುಖವನ್ನು ಮುರಿಯಿರಿ. ಇದೇ ನಾಡಿಗೇ ತಿಳಿಯಲಿ, ನಾಡರಕ್ಷಣೆಗಾಗಿ ತನು ಶೀಲತ್ಯಾಗ ಮಾಡುವಂತಹ ದೇಶಭಕ್ತೆ ಮಾನಿನಿಯರೂ ಇದ್ದಾರೆಂದು."

—ಮಹಾದೇವಿಯ ಮಾತುಗಳನ್ನು ಕೇಳಿದ ರುದ್ರನಾಯಕ ಶಿಲಾಪ್ರತಿಮೆಯಂತಾದ.

—ಮತ್ತೆ ಮಹಾದೇವಿಯೆ ಮಾತನಾಡಿದಳು,

"ನನ್ನನ್ನು ನಾನು ಶತ್ರುವಿಗೆ ಬಲಿಹೋಗುವುದರಿಂದ ನನಗೆ ಅಪಕೀರ್ತಿ ತಟ್ಟಲಾರದು. 'ನಾಡರಕ್ಷಣೆಗಾಗಿ ಶೀಲತ್ಯಾಗಮಾಡಿದ ನಾಡಪ್ರೇಮಿ ಮಹಾದೇವಿಯೆಂದು' ಚರಿತ್ರೆಕಾರರು ನನ್ನನ್ನು ಹೊಗಳುವರು. ಇದರಿಂದ

ನಾಯಕರಾದ ನಿಮಗೂ ಅಪಯಶಸ್ಸು ಹತ್ತಲಾರದು. ಏಕೆಂದರೆ, ನೀವಾಗಿಯೇ ಬಲವಂತವಾಗಿ ನನ್ನನ್ನು ಶತ್ರುವಿಗೆ ಅರ್ಪಿಸುತ್ತಿಲ್ಲ."

—ಈ ಮಾತುಗಳನ್ನಾಡುತ್ತಿದ್ದ ಮಹಾದೇವಿಯಲ್ಲಿ ನಾಯಕ ದೈವೀಮನೋಭಾವವನ್ನು ಗುರುತಿಸಿದ.

ಮಾರನೆಯ ಮುಂಜಾನೆ ಮಹಾದೇವಿ ಐದು ಮಣ ಬಂಗಾರದೊಂದಿಗೆ ದಂಡನಾಯಕನಿದ್ದೆಡೆಗೆ ಹೋಗಿ, ಹೊನ್ನನ್ನೂ, ತನ್ನನ್ನೂ ಆವನಿಗೆ ಅರ್ಪಿಸಿಕೊಂಡಳು.

ಇದರಿಂದ ಸಮಾಧಾನಗೊಂಡ ದಂಡನಾಯಕ, ತನ್ನ ಪ್ರಾಂತ್ಯಕ್ಕೆ ಹಿಂತಿರುಗಿ ಹೋದ.

§ § § §

ನಾಡಿಗಾಗಿ ಶೀಲ ತ್ಯಾಗಮಾಡಿ ಹೊರಟುಹೋದ ಮಹಾದೇವಿಯ ಚಿರಸ್ಮರಣೀಯವಾಗಿ, ರುದ್ರನಾಯಕ ಮತ್ತು ನಾಯಕಪುರದವರು ಸೇರಿಕೊಂಡು "ಮಹಾದೇವಿ ಸತೀಕಲ್ಲ"ನ್ನು ಪ್ರತಿಷ್ಠಿಸಿದರು.

ಕಾಲ ತನ್ನ ಸ್ವಭಾವ ಸಹಜವಾದ ಬದಲಾವಣೆಗಳನ್ನು ಮಾಡುತ್ತಾ ಮುಂದೆ ಮುಂದೆ ಹೋಗುತ್ತಿತ್ತು

“ ಬೂರೆಬಸವಿ ಕಲ್ಲು ”

ನಿರೀಕ್ಷಿಸಿ ! ! !

ರು ಧಿ ರಾ ತ ರ ಂ ಗ

(ಮೃತ್ಯುಮಣಿಯ ಸಾಹಸ ಯಾತ್ರೆ)

ಅತ್ಯದ್ಭುತ ರೋಮಾಂಚಿತ ಪತ್ತೇದಾರಿ

ಬೆಲೆ 1-8

೩೦೧. ಪುಟಗಳು.

ಟಪಾಲು ಹಾಸಲು ಪ್ರತ್ಯೇಕ

-: ಲೇಖಕ :-

ಎಚ್. ನರಸಿಂಹಯ್ಯ

ಪ್ರಕಾಶಕರು

ರಾಜಕಮಲ್ ಪ್ರಕಾಶನ

೧೦೯. ಬಳೇಪೇಟೆ, ಬೆಂಗಳೂರು-೨.

೧

ರುದ್ರನಾಯಕ ಅಸ್ತಂಗತನಾಗಿ ಐವತ್ತು ವರ್ಷಗಳು ರುಳಿ ಹೋಗಿದ್ದವು-

ನಾಯಕಪುರದ ರಾಜಕೀಯವೂ ವಿಪರೀತ ಬದಲಾ ವಣೆಯನ್ನು ಕಂಡಿತ್ತು. ಮಹಾದೇವಿ, ಶತ್ರು ಪಾಳೆಯ ಗಾರನಾದ ದಂಡನಾಯಕನಿಗೆ ಸಂಧಿಯ ಬಳುವಳಿ ಯಾಗಿ, ನಾಡಿನ ಕ್ಷೇಮಕ್ಕಾಗಿ ತನ್ನ ಶೀಲ ತ್ಯಾಗಮಾಡಿ, ಹೊರಟು ಹೋದ ಮಾರನೆಯ ವರ್ಷವೇ ರುದ್ರನಾಯ ಕನ ರುದ್ರ ಆಳ್ವಿಕೆಯೂ ಮುಕ್ತಾಯಗೊಂಡಿತು.

ಮತ್ತೆ ನಾಲ್ಕಾರು ವರ್ಷಗಳು ನಾಯಕಪುರ ಮುತ್ತಾವ ಪಾಳೆಯಗಾರನನ್ನು ಪಡೆಯದೆ ಅನಾಯಕವಾ ಗಿದ್ದರೂ, ಇದ್ದುದರಲ್ಲಿ ಸುಭಿಕ್ಷವಾಗಿಯೇ ನಡೆದಿತ್ತು. ಈ ವೇಳೆಯಲ್ಲಿ ನಾಯಕನ ಕಾವಿನ ಆಳ್ವಿಕೆಯಿಂದ ನೊಂದು ಕಂಗೆಟ್ಟು ಉಸಿರು ಹಿಡಿದುಕೊಂಡಿದ್ದ ನಾಯಕಪುರದ ಪ್ರಜಾಸ್ತೋಮ ಹಾಯಾಗಿ ಉಸಿರಾಡಿತ್ತು.

ಮಹಾದೇವಿ ತನ್ನ ಹೃದಯವಿಶಾಲತೆಯಿಂದ, ಶತ್ರುವಿನಿಂದ ತಮ್ಮ ನಾಡು ಲೂಟಿಯಾಗಿ, ಸಹಸ್ರಾರು ಮಾನಿನಿಯರ ಮಾನಭಂಗವಾಗದಿರಲೆಂಬ ಸಹೃದಯತೆಯಿಂದ, ಶೀಲತ್ಯಾಗ ಮಾಡಿದುದು ಚಿರಸ್ಮರಣೀಯವಾಗಿರಲೆಂದು ಪಾಳೆಯಗಾರ ಹಾಗೂ ಜನತೆ ಅವಳ ನಾಮಾಂಕಿತದಲ್ಲಿ ನೆಟ್ಟ "ಮಹಾದೇವಿ ಸತಿ" ಕಲ್ಲು, ಗಂಗಾಧರೇಶ್ವರನ ಗುಡಿಯ ಪಕ್ಕದಲ್ಲಿ, ಜನತೆಯಿಂದ ನಾಲ್ಕಾರು ವರ್ಷಗಳು ಮಾನ್ಯತೆ ಮತ್ತು ಪೂಜ್ಯತೆಯನ್ನು ಪಡೆಯಿತು.

ಆದರೆ—

ರುದ್ರನಾಯಕನ ಪಾಳೆಯಗಾರತ್ವ ಮುಕ್ತಾಯಗೊಂಡ ಮೂರು-ನಾಲ್ಕು ವರ್ಷಗಳನಂತರ 'ಮಹಾದೇವಿ ಸತಿ ಕಲ್ಲು' ಜನತೆಯ ಮಾನ್ಯತೆ ಪೂಜ್ಯತೆಗಳಿಂದ ವಂಚಿಸಲ್ಪಟ್ಟಿತು. ಆ ಸತೀಕಲ್ಲನ್ನು ಕೇಳುವವರೇ, ನೋಡುವವರೇ ನೋಡಿ ಬೆಂಗಾಗುವವರೇ ಇಲ್ಲವಾಯಿತು.

—ಎಂತಲೇ 'ಮಹಾದೇವಿ ಸತಿಕಲ್ಲ'ನ್ನು ಕೇಳುವವರೇ ಇಲ್ಲದಂತಾಗಿ, ಆ ಮಹತ್ವವಾದ ಸತಿಕಲ್ಲು' ಕೇವಲ ಒಂದು ಸಾಧಾರಣ ಕಲ್ಲಾಯಿತು.

ಕಲ್ಲು ತನ್ನ ಕಥೆಯನ್ನು ಕೂಗಿ ಹೇಳುತ್ತಿದ್ದರೂ, ಆ ಕಲ್ಲಿನ ಸೊಲ್ಲನ್ನು ಆಲಿಸುವವರೇ ಇಲ್ಲವಾದರು!

ಕಾಲದ ಓಟದ ಸ್ಪರ್ಧೆಯಲ್ಲಿ, ಆ ಸತೀಕಲ್ಲು ಸೋತು, ಬಹು ಹಿಂದೆ ಬಿದ್ದಿತು.

—ಮಹತ್ವವನ್ನೇ ಕಳೆದುಕೊಂಡ ಕಲ್ಲಾಯಿತು, ಆ ಸತೀಕಲ್ಲು.

೨

'ಮಹಾದೇವಿ ಸತಿಕಲ್ಲು' ಐವತ್ತು ವರ್ಷಗಳ ಕಾಲ ಬಿಸಿಲು, ಮಳೆ, ಚಳಿ, ಗಾಳಿಗಳಿಗೆ ತನ್ನ ಮೈತೆತ್ತು; ನಾಯಕಪುರದ ರಾಜಕೀಯವೂ ಬದಲಾಗಿತ್ತು; ಪ್ರಜಾಸ್ತೋಮದಲ್ಲಿ ಅದೆಷ್ಟೋ ಹಣ್ಣೆಲೆಗಳು ಉದುರಿಹೋಗಿ, ಹಸಿರೆಲೆಗಳು ಚಿಗುರಿದ್ದುವು.

—ಆಗ ನಾಯಕಪುರದ ರಾಜಕೀಯ ಹೀಗಿತ್ತು.

ಪ್ರಜೆಗಳ ಪ್ರೀತಿ ವಿಶ್ವಾಸಗಳನ್ನು ಗಳಿಸಿದ್ದ ರಂಗನಾಯಕನಾಗ ಪಾಳೆಯಗಾರನಾಗಿದ್ದ. ಕಾರ್ತಿಕ್ಯದ

ಗುರುತನ್ನೇ ಅರಿಯದಿದ್ದ ಆತ, ತನ್ನ ಪ್ರಜೆಗಳ ಮತ್ತು ಪ್ರಾಂತ್ಯದ ಪ್ರಗತಿಗಾಗಿ ಬಹು ಶ್ರಮಿಸುತ್ತಿದ್ದ. ಧನ ಮದ. ಅಧಿಕಾರ ಮದಗಳಿಗೆ ಅವನ ಬಳಿ ಆಶ್ರಯ ವಿರಲಿಲ್ಲ.

ರಂಗನಾಯಕ ತುಂಬು ಹರಯದ ಅಜಾನುಬಾಹು. ಶುದ್ಧ ಬ್ರಹ್ಮಚಾರಿ. ಅವನ ಮಹಲಿನಲ್ಲಿ ಮಹಿಳೆಗೆ ಸ್ಥಾನವಿರಲಿಲ್ಲ. ಅವಳಿಗೆ ಸ್ತ್ರೀ ಸಾನಿಧ್ಯ ನಿಷೇಧ ವಾಗಿತ್ತು. ಅಂದರೆ ಆತ ಸ್ತ್ರೀದ್ವೇಷಿಯಲ್ಲ. ಅವನಿಗೆ ಸ್ತ್ರೀಯರಲ್ಲಿ ಅಪಾರ ಗೌರವವಿತ್ತು.

ರಂಗನಾಯಕ ಜನಪ್ರಿಯ ಪಾಳೆಯಗಾರನಾಗಿದ್ದರೂ ಆತ ಸರಳಜೀವಿ. ನಿರಾಡಂಬರಿ.

ಮಲ್ಲನಾಯಕ ಪಾಳೆಯಗಾರನ ಕಿರಿಯ ತಮ್ಮ. ಅಣ್ಣನಷ್ಟೆ ಆತನೂ ಒಳ್ಳೆಯವ. ಮಲ್ಲನಾಯಕನಿ ಗಾಗಲೇ ಮದುವೆಯಾಗಿತ್ತು. ಅಣ್ಣನ ಭವನದಲ್ಲಿರಲು ಒಪ್ಪಿರದಿದ್ದ ಮಲ್ಲನಾಯಕ ಊರೊಳಗಿನ ಒಂದು ದೊಡ್ಡ ಮನೆಯಲ್ಲಿ ಸಂಸಾರಮಾಡಿಕೊಂಡಿದ್ದ.

ಮಲ್ಲನಾಯಕನಿಗೆ ಮದುವೆಯಾಗಿ ಆರು ವರ್ಷಗಳು

ಜಾರಿದ್ದರೂ, ಅದೇಕೋ ಸಂತಾನ ಭಾಗ್ಯ ಅವನ ಭಾಗಕ್ಕೆ ಬಂದಿರಲಿಲ್ಲ. ಅವನ ಹೆಂಡತಿ ಪಾರ್ವತಿಯು ಹಾಗೆಯೇ ಅವನಿಗೆ ಮಕ್ಕಳನ್ನು ಕಂಡರೆ ಪ್ರಾಣ. ಆ ದಂಪತಿಗಳ ದೃಷ್ಟಿಯಲ್ಲಿ, ಮಕ್ಕಳಿಲ್ಲದ ಮನೆ ಮನೆಯೇ ಅಲ್ಲ.

ಮಕ್ಕಳಿಗಾಗಿ ಪಾರ್ವತಿ ತನಗೆ ತೋರಿದ ದೇವರುಗಳನ್ನೆಲ್ಲಾ ಬೇಡಿದ್ದಳು. ಎಲ್ಲಾ ದೇವರುಗಳಿಗೂ ಹರಕೆ ಹೊತ್ತಳು. ನಾಗರ ದೋಷವಿರಬಹುದೆಂದು, ನಾಗರ ಕಲ್ಲಿನ ಪ್ರತಿಷ್ಠೆಯನ್ನು ಮಾಡಿಸಿದ್ದಳು.

ಪಾರ್ವತಿ ಸಂತಾನಕ್ಕಾಗಿ ಪಟ್ಟ ಪ್ರಯತ್ನವೆಲ್ಲಾ ಕೇವಲ ಪ್ರಯತ್ನವಾಗಿಯೇ ಉಳಿಯಿತು.

ಇದರಿಂದ ಗಂಡ ಹೆಂಡಿರು ನಿರಾಶರಾದರು.

ಅದೊಂದು ಮುಚ್ಚಂಜೆ, ಪಾರ್ವತಿ ಮನೆಯಮುಂದೆ ಕುಳಿತು ಜೇಪರ ಕಳೆಯುತ್ತಿದ್ದಳು. ಅಣ್ಣನ ಭವನಕ್ಕೆ ಹೋಗಿದ್ದ ಮಲ್ಲನಾಯಕನಿನ್ನೂ ಮನೆಗೆ ಬಂದಿರಲಿಲ್ಲ.

"ಕವಳಾ ತಾಯೀ…… ….”

—ಯಾರೊ ಮನೆಯಮುಂದೆ ಬಂದು ನಿಂತು ಕೂಗಿದ

ಹಾಗಾಯಿತು.

ಪಾರ್ವತಿ ಆ ಕಡೆಗೆ ತಿರುಗಿ ನೋಡಿದಳು.

ನಡುವಯಸ್ಸಿನ ಸುಂದರವಾದ ಹೆಂಗಸೊಬ್ಬಳು ನಿಂತಿದ್ದಾಳೆ. ಅವಳ ಸೀರೆ ಕುಪ್ಪಸಗಳು ಕೊಳಕಿನ ತವರು ಮನೆಯಂತಿದೆ. ಎಡಭಾಗದ ಅವಳ ನಡುವಿನಲ್ಲಿ ಮುದ್ದಾಗಿರುವ ಸುಮಾರು ಒಂದು ವರ್ಷದ ಹೆಣ್ಣುಮಗು ಬಾಯಿಯಲ್ಲಿ ಅದೇನನ್ನೋ ಇರಿಸಿಕೊಂಡು ಕುಳಿತಿದೆ. ಅವಳ ಬಲಭಾಗದಲ್ಲಿ ಒಂದು ದೊಡ್ಡ ಜೋಳಿಗೆಯಿದೆ. ಜೋಳಿಗೆಯ ತುಂಬಾ ಯಾವುಯಾವುದೋ ಸರಕುಗಳಿವೆ.

"ಕವಳಾ ತಾಯಿ..........."

—ಮತ್ತೆ, ನಿಂತಿದ್ದ ಹೆಂಗಸು ಕೂಗಿದಳು.

ಕುಳಿತಿದ್ದ ಪಾರ್ವತಿಗೆ ಆ ತಾಯಿ ಮಗುವನ್ನು ನೋಡಿ ಏನೆನಿಸಿತೋ ಏನೋ—

"ಬಾಮ್ಮ ಇಲ್ಲಿಗೆ"

—ಎಂದು ತನ್ನ ಬಳಿಗೆ ಅವಳನ್ನು ಕರೆದಳು. ಆ ಹೆಂಗಸು ಪಾರ್ವತಿಯ ಮುಂದೆ ಬಂದು ನಿಂತಳು.

"ನಿನ್ನ ಜೋಳಿಗೆಯಲ್ಲಿರುವುದು ಏನೆ ಅಮ್ಮ"

—ಎಂದು ಪಾರ್ವತಿ ಕೇಳಿದಳು.

"ಬಳೆ, ಬಿಚ್ಚಾಲೆ, ಕರೀಮಣಿ, ಕುಂಕುಮ"

"ಅವುಗಳನ್ನೆಲ್ಲಾ ಅದೇಕೆ ಇಟ್ಟುಕೊಂಡಿದ್ದಿ?"

"ಮಾರುವುದಕ್ಕಾಗಿ"

"ಮತ್ತೇಕೆ ಭಿಕ್ಷ ಕೇಳುತ್ತಿದ್ದಿ?"

"ಅಯ್ಯೋ ಇವೆಲ್ಲಾ ಏನು ಮಹಾ ಮಾರಾಟವಾಗುತ್ತೆ ತಾಯಿ. ಮೇಲಾಗಿ ಈಗ ಯಾವ ಹಬ್ಬ ಹರಿದಿನಗಳ ಸಾಲೂ ಇಲ್ಲದಿರುವುದರಿಂದ, ನಮ್ಮ ಸರಕನ್ನು ಕೇಳುವವರಾರು ಇವತ್ತು ಊರೆಲ್ಲಾ ಸುತ್ತಿದರೂ ಮೂರುಕಾಸಿನ ವ್ಯಾಪಾರವಾಗಿಲ್ಲ. ಅದಕ್ಕೆ ಈಗ ಭಿಕ್ಷಕ್ಕೆ ಹೊರಟೆ."

"ನಿನ್ನ ಕಂಕುಳಲ್ಲಿರುವ ಮಗು ನಿನ್ನದೆ ?"

"ಅಯ್ಯೋ! ಇದೊಂದು ಪ್ರಾರಬ್ಧ ನನಗೆ"

"ಅದೇಕೆ ಹಾಗೆ ಹೇಳುತ್ತಿ?"

"ಅಯ್ಯೋ ಮಕ್ಕಳು ಯಾರಿಗೆ ಬೇಕಮ್ಮ"

—ಅವಳಾಡಿದ ಈ ಮಾತನ್ನು ಕೇಳಿ ಪಾರ್ವತಿಗೆ ಆಶ್ಚರ್ಯವಾಯಿತು. ತನಗೆ ಮಕ್ಕಳು ಬೇಕೆಂದರೂ ಇಲ್ಲ. ಅವಳಿಗೆ ಮಗು ಇದ್ದರೂ! ಮಕ್ಕಳು ಯಾರಿಗೆ

ಬೇಕಮ್ಮ! ಎಂದು ಜಿಗುಪ್ಸೆ ತಾತ್ಸಾರಗಳಿಂದ ಹೇಳು ತ್ತಿದ್ದಳು. ವಿಚಿತ್ರವಾಗಿವೆ, ಪ್ರಪಂಚ.

"ಹಾಗಾದರೆ ಈ ಮಗು ನಿನ್ನದಲ್ಲವೆ?"

—ಪಾರ್ವತಿ ಕುತೂಹಲೆಯಾಗಿ ಕೇಳಿದಳು.

"ಅಲ್ಲ"—ಅವಳೆಂದಳು.

"ಹಾಗೆಂದರೆ ?" ಪಾರ್ವತಿಯ ಸಮಸ್ಯಾತ್ಮಕವಾದ ಪ್ರಶ್ನೆ !

"ಈ ಪ್ರಾರಬ್ಧ ನನ್ನ ತಂಗಿ ಮಗು. ಅವಳು ಸಾಯು ವಾಗ ಇದನ್ನು ನನ್ನ ತಲೆಗೆ ಕಟ್ಟಿ ಹೊರಟುಹೋದಳು. ಆಡುವುದಕ್ಕಿಲ್ಲ, ಅನುಭವಿಸುವುದಕ್ಕಿಲ್ಲ ಹಾಗಾಗಿದೆ ನನ್ನ ಸ್ಥಿತಿ. ನನ್ನ ಜೀವನ ನಾನು ನಡೆಸಿಕೊಂಡು ಹೋಗು ವುದೇ ಕಷ್ಟವಾಗಿರುವಾಗ, ಈ ಮಗು ಬೇರೆ ನನ್ನ ಪ್ರಾಣ ಹಿಂಡುವುದಕ್ಕೆ."

"ಈ ಮಗು ನಿನಗೆ ಅಷ್ಟೊಂದು ಭಾರವಾಗಿದೆಯೊ"

"ಅಯ್ಯೋ ಅದನ್ನೇಕೆ ಕೇಳುತ್ತೀರಿ. ನಮ್ಮ ಕಷ್ಟ ವನ್ನು ಕೇಳಿ ಪರಿಹರಿಸುವವರು ಯಾರಿದ್ದಾರೆ? ಹೋಗಲಿ ಏನಾದರೂ ತಿನ್ನಲಿಕ್ಕೆ ಕೊಡಿ ತಾಯಿ"

"ನೀನು ಬೇಡುವ ವಸ್ತುವನ್ನು ಕೊಡುತ್ತೇನೆ. ಹೇಳು ನಿನಗೆ ಈ ಮಗು ಬೇಡವಾಗಿದೆಯೆ? ನೀನು ಅದನ್ನು ಸಾಕಲಾರೆಯಾ? "

"ಹೌದು. ಈ ಮಗು ನನಗೆ ಬೇಡವಾಗಿದೆ; ಭಾರವಾಗಿದೆ; ನಾನು ಅದನ್ನು ಕಟ್ಟಿಕೊಂಡು ಸಾಕಲಾರೆ"

"ಹಾಗಾದರೆ ನಿನ್ನ ಈ ಮಗವನ್ನು ನನಗೆ ಕೊಟ್ಟು ಬಿಡುವಿಯಾ? "

—ಪಾರ್ವತಿಯ ಈ ಮಾತನ್ನು ಕೇಳಿ, ಆ ಕೂಸಿನೊಡತಿಗೆ ಒಂದು ನಿಮಿಷ ಏನು ಮಾತನಾಡಲೂ ಆಗಲಿಲ್ಲ. ಒಂದೇ ಸಮನೆ ಪಾರ್ವತಿಯನ್ನೇ ಆಕೆ ನೋಡಲಾರಂಭಿಸಿದಳು. ಅವಳ ನೋಟದಲ್ಲಿ ವಿಪರೀತವಾದ ವಿಸ್ಮಯವಿತ್ತು.

"ಹಾಸ್ಯ ಮಾಡುತ್ತಿರುವಿರ ತಾಯಿ? "

—ಆಕೆ ಕೇಳಿದಳು.

"ಇಲ್ಲ. ಮಕ್ಕಳೆಂದರೆ ದೇವರ ಸಮಾನ. ಮಕ್ಕಳ ವಿಷಯವಾಗಿ ಹಾಸ್ಯವಾಡಿದರೆ ದೇವರನ್ನೆ ಹಾಸ್ಯ ಮಾಡಿದಂತಾಗುತ್ತದೆ"

"ನೀವು ಕೇಳಿದ್ದು, ಹಾಗಾದರೆ ನಿಜವೆ? "

"ಸತ್ಯವಾಗಿಯೂ ನಿಜ. ನಿನಗೆ ಈ ಮಗು—ಭಾರ ವಾಗಿ ಬೇಡವಾಗಿದ್ದರೆ ನನಗೆ ಕೊಡು. ನಾನು ಸಾಕಿ ಕೊಳ್ಳುತ್ತೇನೆ. ಇದಕ್ಕಾಗಿ ನೀನು ಏನು ಕೇಳಿದರೂ ಸರಿ, ನಾನು ಕೊಡಲು ಸಿದ್ಧಳಿದ್ದೇನೆ."

ಪಾರ್ವತಿಯ ನುಡಿಗಳನ್ನು ಕೇಳಿ ಆಕೆ ಒಂದು ನಿಮಿಷ ಯೋಚನೆ ಮಾಡಿದಳು. ನಂತರ ನಿರ್ಧಾರಕ್ಕೆ ಬಂದು,

"ನಾವು ಕೀಳು ಜಾತಿಯವರು. ತಾವು ಉತ್ತಮ ಜಾತಿಯವರು. ಕೀಳು ಜಾತಿಯವರ ಮಗುವನ್ನು ತೆಗೆದು ಕೊಳ್ಳಬಹುದೆ? ಯೋಚಿಸಿನೋಡಿ"

"ಇದರಲ್ಲಿ ಯೋಚಿಸಬೇಕಾದ ವಿಷಯವೇನೂ ಇಲ್ಲ. ನಾನು ಮೊದಲೇ ಹೇಳಲಿಲ್ಲವೆ, ಮಕ್ಕಳು ದೇವರ ಸಮಾನ ವೆಂದು. ಎಂತಲೇ ಮಕ್ಕಳ ವಿಷಯದಲ್ಲಿ ಜಾತಿಯ ಪ್ರಶ್ನೆಯೂ ಬಾರದು"

"ಇನ್ನು ! ನಿಮ್ಮ ಇಷ್ಟ"

"ಅಂದರೆ.... ......"

"ನಾನೇನೋ ಮಗುವನ್ನು ಕೊಟ್ಟುಬಿಡಲು ಸಿದ್ಧ"

"ಹಾಗಾದರೆ ಮಗುವನ್ನು ತೆಗೆದುಕೊಳ್ಳಲು ನಾನೂ ಸಿದ್ಧ."

"ಹಾಗೇ ಮಾಡಿ."

"ಇದಕ್ಕೆ ನಾನು ನಿನಗೇನು ಕೊಡಬೇಕು ಕೇಳು"

"ನೀವೇ ಹೇಳಿದಂತೆ ದೇವರ ಸಮಾನವಾದ ಮಕ್ಕಳಿಗೆ ಬೆಲೆ ಕಟ್ಟಲು ಸಾಧ್ಯವೆ?"

"ನೀನು ನಿನಗಿಷ್ಟಬಂದಷ್ಟು ಮೌಲ್ಯವನ್ನು ಕೇಳಬಹುದು."

"ನನಗೇನೂ ಬೇಕಾಗಿಲ್ಲ. ಮಗು ಶ್ರೀಮಂತರ ಮನೆ ಸೇರಿ ಸುಖವಾಗಿರುವುದೊಂದೇ ಸಾಕು. ಬೇಕಾದರೆ ನನಗೆ ಎರಡು ಹಳೇ ಸೀರೆ ಕೊಡಿ. ಈಗ ಸ್ವಲ್ಪ ಅನ್ನ ಹಾಕಿಸಿಬಿಡಿ"

—ಎಂದವಳೇ, ತನ್ನ ನಡುವಿನಲ್ಲಿದ್ದ ಮಗುವನ್ನು ನಿರ್ಯೋಚನೆಯಿಂದ ಪಾರ್ವತಿಯ ಕೈಗೆ ಕೊಟ್ಟು ಬಿಟ್ಟಳು.

ಮಗು ತನ್ನ ಕೈಗೆ ಬಂದ ಕೂಡಲೇ ಪಾರ್ವತಿಗೆ ಪರಮಾನಂದವಾಯಿತು. ತಾನು ಕುಳಿತಿದ್ದ ಮಂದಲಿಗೆಯು

ಮೇಲೆ ಆ ಕೂಸು ಕೊಟ್ಟವಳನ್ನು ಕೂಡಕರೇಳಿ, ಪಾರ್ವತಿ ಮಗುವನ್ನು ಎತ್ತಿಕೊಂಡು ಮನೆಯೊಳಗೆ ನಡೆದಳು.

ಕೂಸು ಹುಟ್ಟುವ ಮೊದಲೇ ಮಕ್ಕಳ ಒಟ್ಟಿಗಳನ್ನು ಸಿದ್ಧಪಡಿಸಿಟ್ಟುಕೊಂಡಿದ್ದ ಪಾರ್ವತಿ, ಆ ಮಗುವಿಗೆ ಮುಖ ತೊಳೆದು, ಹೊಸ ಹೊಸ ಒಟ್ಟಿಗಳನ್ನು ಹಾಕಿದಳು. ಮತ್ತೆ ಮಗುವನ್ನು ಎತ್ತಿಕೊಂಡು, ಜಗುಲಿಯ ಮೇಲೆ ಕುಳಿತಿದ್ದ ಮಗುವಿನ ಮಾಲೀಕಳಿಗೆ ಮಗುವನ್ನು ತೋರಿಸಿದಳು.

ತನ್ನ ಬಳಿಯಲ್ಲಿ ಬಡತನದಿಂದಿದ್ದ ಮಗು ಶ್ರೀಮಂತ ಉಡಿಗೆಯಲ್ಲಿದ್ದುದನ್ನು ನೋಡಿ ಆಕೆಗೂ ಸಂತೋಷವಾಯಿತು.

ಪಾರ್ವತಿಯ ಮನೆಯ ಅಡಿಗೆಯವನು ಆ ತಿರುಪೆಯವಳಿಗೆ ಎಲೆ ಹಾಕಿ ಊಟ ಬಡಿಸಿದ. ಕೆಲವು ಭಕ್ಷ್ಯಗಳನ್ನು ಎಲೆಯಲ್ಲಿ ಕಟ್ಟಿ ಅವಳ ಜೋಳಿಗೆಗೂ ತುರುಕಿದ.

ಪಾರ್ವತಿ ಅವಳಿಗೆ ನಾಲ್ಕು ಒಳ್ಳೆಯ ತನ್ನ ಸೀರೆಗಳನ್ನು ಕೊಟ್ಟಳು. ಹತ್ತಾರು ಬೆಳ್ಳಿಯ ನಾಣ್ಯಗಳನ್ನು ಅವಳ ಕೈಗೆ ಹಾಕಿದಳು.

—ಮಗುವಿನೊಡತಿ ಸಂತುಷ್ಟಳಾದಳು.

ಸೊಗಸಾದ ಊಟದೊಂದಿಗೆ, ಇನ್ನು ಒಂದೆರಡು ವರ್ಷಕ್ಕೂ ಆಗುವ ಸೀರೆಯನ್ನೂ, ಸ್ವಲ್ಪ ನಗದು ಹಣ ವನ್ನು ಪಡೆದುಕೊಂಡ ಆಕೆ ಹೊರಡಲು ಪಾರ್ವತಿಯ ಅಪ್ಪಣೆಯನ್ನು ಕೇಳಿದಳು.

ಪಾರ್ವತಿ ಕೃತಜ್ಞಾಪೂರ್ವಕವಾಗಿ ಹೋಗಿಬಾರೆಂದಳು.

ಹೊರಟು ಎದ್ದುನಿಂತ ಕೂಸು ಕೊಟ್ಟವಳು ತನ್ನ ಜೋಳಿಗೆಯಿಂದ ಒಂದು ದೊಡ್ಡ ಕಾಗದದ ಪೊಟ್ಟಣ ವನ್ನೂ, ಒಂದು ಸಣ್ಣ ಪೊಟ್ಟಣವನ್ನೂ ಪಾರ್ವತಿಯ ಕೈಗಿತ್ತು.

"ಇದು ಕುಂಕುಮಾ ತಾಯಿ. ಇದನ್ನು ಹಚ್ಚಿಕೊಂಡು ಮುತ್ತೈದೆ ಸಾವಿತ್ರಿಯಾಗಿ ನೂರ್‍ಕಾಲ ಬಾಳಿ"

—ಎಂದು ಹೇಳಿ, ಮತ್ತೊಮ್ಮೆ ಹಿಂತಿರುಗಿ ನೋಡದೆ ಹೊರಟಳು.

ಪಾರ್ವತಿ ಅವಳನ್ನೇ ನೋಡುತ್ತಾ ನಿಂತಳು. ಬಹು ಹೊತ್ತು ಹಾಗೆಯೇ ನಿಂತಿದ್ದಳು. ನಂತರ ಅವಳ

ನಡುವಿನಲ್ಲಿದ್ದ ಮಗು ಅಳಲಿಕ್ಕಾರಂಭಮಾಡಿದಾಗಲೇ ಪಾರ್ವತಿ ಜಾಗೃತಾವಸ್ಥೆಗೆ. ಇಳಿದುದು.

ಅಳುತ್ತಿದ್ದ ಮಗುವಿನ ಧ್ವನಿ ಪಾರ್ವತಿಗೆ ಕರ್ಣಾನಂದಕರವಾಗಿತ್ತು. ಆದರ ಅಳುಮುಖವನ್ನು ಪಾರ್ವತಿ ತನ್ನ ನಗುಮುಖದಿಂದ ನೋಡುತ್ತಾ, ಮಗುವನ್ನು ಒಳಕ್ಕೆ ಕರೆದುಕೊಂಡು ಹೊರಟಳು.

೩

ಪಾರ್ವತಿಯ ಪತಿ ಮಲ್ಲನಾಯಕ ಮನೆಗೆ ಹಿಂತಿರುಗಿ ಬರುವಲ್ಲಿ, ಪಾರ್ವತಿ ತನ್ನ ಮಗುವಿಗೆ ತೊಟ್ಟಿಲು ಕಟ್ಟಿ ಲಾಲಿ ಹಾಡುತ್ತಿದ್ದಳು.

ಮಲ್ಲನಾಯಕನಿಗೆ ತಾನು ನೋಡುತ್ತಿದ್ದ ದೃಶ್ಯದ ಅರ್ಥವೇ ಆಗಲಿಲ್ಲ.

ಗಂಡನನ್ನು ಕಂಡೊಡನೆಯೇ ಪಾರ್ವತಿ ಸಂತೋಷದಿಂದ ಅವನ ಬಳಿ ಬಂದು, ತನಗೆ ಮಗು ದೊರೆತುದರ

ಪೂರ್ವೋತ್ತರಗಳನ್ನೆಲ್ಲಾ ನಿರೂಪಿಸಿದಳು.

ಹೆಂಡತಿಯ ಮಾತುಗಳನ್ನು ಕೇಳಿ, ತೊಟ್ಟಿಲಿನಲ್ಲಿದ್ದ ಮಗುವಿನ ಮುದ್ದು ಮುಖ ನೋಡಿ ಮಲ್ಲನಾಯಕನೂ ಹಿರಿಹಿರಿ ಹಿಗ್ಗಿದ.

ಪಾರ್ವತಿ-ಮಲ್ಲನಾಯಕರು ಆ ಮಗುವನ್ನು "ಬಸವಿ" ಎಂದು ಹೆಸರಿಟ್ಟು ಕರೆದರು.

ಬಸವಿ ಪಾರ್ವತಿಯ ಅಚ್ಚುಮೆಚ್ಚಿನ ಕುವರಿಯಾದಳು. ಮಲ್ಲನಾಯಕನ ಮೋಹದ ಮಗಳಾದಳು. ಅವರ ಮನೆಯನ್ನು ಸಂತಸದಿಂದ ಬೆಳಗುವ ನಂದಾದೀಪವಾದಳು.

§ § § §

ಮಲ್ಲನಾಯಕನ ಅಣ್ಣ ಪಾಳೆಯಗಾರನಾಗಿದ್ದ ರಂಗನಾಯಕ, ತನ್ನ ತಮ್ಮ ಹೀನ ಜಾತಿಯ ಅನಾಥ ಮಗುವೊಂದನ್ನು ಕೊಂಡು ಪಾಲಿಸುತ್ತಿರುವುದನ್ನು ಕೇಳಿ ಸ್ವಲ್ಪ ಅಸಮಾಧಾನಗೊಂಡ. ಹಾಗೆ ಮಾಡುವುದು ತಮ್ಮ ಮನೆತನದ ಗೌರವಕ್ಕೆ ತಕ್ಕುದಲ್ಲವೆಂದು ತಮ್ಮನಿಗೆ ಹೇಳಿದ. ಈಗಲೂ ಆ ಮಗುವನ್ನು ಯಾರಿಗಾದರೂ

ಕೊಟ್ಟುಬಿಟ್ಟರೆ ತನಗೆ ಸಂತೋಷವೆಂದ.

ಆದರೆ ಅಣ್ಣನ ಮಾತುಗಳಾವುವೂ ಮಲ್ಲನಾಯ
ಮೇಲೆ ಪರಿಣಾಮವನ್ನು ತರಲಿಲ್ಲ.

"ಮಕ್ಕಳಾಗದ ನಾನು ಮಗುವನ್ನು ಕೊಂಡು
ತ್ತಿರುವುದರಿಂದ ನನಗಾಗಬಹುದಾದ ನಷ್ಟವೇನು?"
—ತಮ್ಮ ಅಣ್ಣನನ್ನು ಕೇಳಿದ.

"ಯಾವ ಕೆಟ್ಟ ನಕ್ಷತ್ರದಲ್ಲಿ, ದಾರಿದ್ರ ಕಂಕಣ
ಕೊಂಡು ಹುಟ್ಟಿದೆಯೋ ಏನೋ, ಅಂತಹ ಮಗು
ಮನೆ ಸೇರಿದರೆ ನಿನಗೆ ಕೆಡಕು ಸಂಭವಿಸಬಹುದು.

—ಅಣ್ಣ ಹೇಳಿದ ಈ ಭಯಾನಕ ಮಾತುಗಳು
ನಾಯಕನಿಗೆ ಸಮಂಜಸವಾಗಿ ಕಾಣಲಿಲ್ಲ. ಇವ
ಮೂಢನಂಬಿಕೆ ಅಂಧಶ್ರದ್ಧೆ ಎಂದುಕೊಂಡು ಸುಮ್ಮ
ಬಿಟ್ಟ.

ಮತ್ತೆ ರಂಗನಾಯಕ ಈ ವಿಚಾರವಾಗಿ ತಮ್ಮನೊ
ಮಾತನಾಡಲಿಲ್ಲ.

೪

ಸೌಖ್ಯವಾದ ವಾತಾವರಣದ ಮಲ್ಲನಾಯಕನ ಮನೆಯಲ್ಲಿ, ಪಾರ್ವತಿಯ ತಾಯ್ತನದ ಪಾಲನೆಯಿಂದ ಬಸವಿ ಬೆಳವಣಿಗೆಯ ಮೆಟ್ಟಲುಗಳನ್ನು ಹತ್ತುತ್ತಿದ್ದಳು.

—ಈಗ ಬಸವಿಗೆ ಐದು ವರ್ಷಗಳು ತುಂಬಿದೆ.

ಯಾವ ವಿಷಘಳಿಗೆಯಲ್ಲಿ ರಂಗನಾಯಕ ಬಸವಿಯದು 'ಕೆಟ್ಟ ನಕ್ಷತ್ರ, ದಾರಿದ್ರ ಕಂಕಣ'ವೆಂದು ಹೇಳಿದ್ದನೋ ಅದು ಈಗೀಗ ಸತ್ಯವಾಗಿ ಕಾಣುತ್ತಿದೆ.

ಎಂದು ಬಸವಿ ಪಾರ್ವತಿಯ ಮನೆಯ ಮಗುವಾದಳೋ, ಅಂದಿನಿಂದ ಪಾರ್ವತಿಯ ಆರೋಗ್ಯವೆ ಕೆಟ್ಟಿತ್ತು. ಪಾರ್ವತಿ ಒಂದುವಾರ ಆರೋಗ್ಯದಿಂದಿದ್ದರೆ ಮತ್ತೊಂದು ವಾರ ಹಾಸಿಗೆಯನ್ನು ಹಿಡಿದು ಮಲಗಿರುತ್ತಿದ್ದಳು. ಇದರಿಂದ ಪಾರ್ವತಿಯ ದೇಹಪ್ರಮಾಣವೇ ಇಳಿದು ಹೋಗಿ ಆಕೆ ಎಲಬಿನ ಹಂದರವಾದಳು.

ಬಸವಿಯಿಂದಲೇ ಹೀಗೆಲ್ಲಾ ಆಗುತ್ತಿದೆಯೆಂದು ವಿವೇಚಿಸಿಕೊಂಡ ಮಲ್ಲನಾಯಕ, ಬಸವಿಯನ್ನು ಮನೆಯಿಂದ ಹೊರಗೆ ಹಾಕಿಬಿಡಬೇಕೆಂದು ಯೋಚಿಸಿದ. ಆದರೆ ಐದು ವರ್ಷದ ನಿರಪರಾಧಿ ಬಾಲೆಯಾಗುತ್ತಿದ್ದ ಬಸವಿಯ ಪ್ರಶಾಂತ ಮುಖವನ್ನು ನೋಡಿದೊಡನೆಯೇ ಅವನ ಯೋಚನೆ, ಅವನ ನಿಶ್ಚಯಗಳು ನಿರ್ನಾಮವಾಗಿ ಹೋಗುತ್ತಿದ್ದವು.

"ಈ ಹಾಳು ಬಸವಿಯನ್ನು ಮನೆಗೆ ತಂದುದರಿಂದಲೇ ಹೀಗೆಲ್ಲಾ ಅನಿಷ್ಟಗಳು ನಿನ್ನನ್ನು ಕಾಡುತ್ತಿವೆ."

—ಎಂದು ಗಂಡ ಹೇಳುತ್ತಿದ್ದ ಮಾತಿನಲ್ಲಿ ಪಾರ್ವತಿಗೆ ಸತ್ಯ ಕಾಣುತ್ತಿರಲಿಲ್ಲ. ಬಸವಿಯನ್ನು ಪಾರ್ವತಿ ಅಷ್ಟು ಹಚ್ಚಿಕೊಂಡಿದ್ದಳು.

ಬಸವಿಯನ್ನು ಮನೆಯಲ್ಲಿ ಇರಿಸಿಕೊಳ್ಳಲೂ ಮನಸ್ಸಿರದೆ, ಮನೆಯಿಂದ ಹೊರಗೆ ಹಾಕಲೂ ಮನಸ್ಸು ಬಾರದೆ ಮಲ್ಲನಾಯಕ ತಳಮಳಿಸುತ್ತಿದ್ದ.

ಪಾರ್ವತಿ ಬೇಕಾದರೆ ತಾನು ಸಾಯಲು ಸಿದ್ಧಳಿದ್ದಳೇ ವಿನಃ, ತನ್ನ ಕೈಯಾರ ಹಾಲು ಕುಡಿಸಿ ಬೆಳೆಸಿದ್ದ ಬಸವಿಯನ್ನು ಮಾತ್ರ ಹೊರಗೆ ಹಾಕಿ ಅನಾಥೆಯನ್ನಾಗಿ

ಮಾಡಲು ಅವಳು ಸರ್ವಥಾ ಒಪ್ಪುವಂತಿಲ್ಲ.

ಆ ಮನೆಯಲ್ಲಿ ಬಸವಿಯ ಸಮಸ್ಯೆ, ಬಾಯಿಗೆ ಹಾಕಿಕೊಂಡಂತಿದ್ದ ಬಿಸಿತುಪ್ಪವಾಗಿತ್ತು. ನುಂಗಲೂ ಆಗದು; ಉಗುಳಲೂ ಆಗದು.

ದಿನಗಳೆದಂತೆಲ್ಲಾ ಪಾರ್ವತಿಯ ದೇಹಸ್ಥಿತಿ ಕರುಣಾಜನಕವಾಯಿತು.

ಬಸವಿಯ ಜೆಸೆಯಿಂದ ಪಾರ್ವತಿ ನರಕಯಾತನೆಯನ್ನು ಅನುಭವಿಸುತ್ತಿದ್ದಾಳೆ.— ಹೀಗೆಂದು ಮಲ್ಲನಾಯಕ ಆಲೋಚಿಸಿಕೊಳ್ಳುತ್ತಿದ್ದ.

ಬಸವಿಗೆ ಹತ್ತು ವರ್ಷ ತುಂಬಲು, ಪಾರ್ವತಿ ಸತ್ತುಹೋದಳು.

ತನ್ನ ಮಾತು ನಿಜವಾಯಿತೆಂದುಕೊಂಡ,— ರಂಗನಾಯಕ.

ತನ್ನ ಊಹೆ ಸತ್ಯವಾಯಿತಲ್ಲಾ-ಎಂದು ಕೊಂಡ ಮಲ್ಲನಾಯಕ.

ಅನ್ಯಾಯವಾಗಿ ಅಮ್ಮ ಸತ್ತು ಹೋದಳಲ್ಲಾ-ಎಂದುಕೊಂಡಳು ಬಸವಿ.

ತಾನೂ ಏನಾದರು ಅಂದುಕೊಳ್ಳಲು ಪಾರ್ವತಿ ಬದುಕೇ ಇರಲಿಲ್ಲ.

× × × ×

ಪಾರ್ವತಿ ಸತ್ತುಹೋದ ವಾರದ ನಂತರ ರಂಗನಾಯಕ ಮತ್ತೆ ತಮ್ಮನಿಗೆ ಹೇಳಿದ—

"ನೋಡಿದೆಯಾ ಬಸವಿಯ ದೆಸೆಯಿಂದಾದ ಪರಿಣಾಮ. ಹಾಲುಹಾಕಿ ಸಾಕಿದವರನ್ನೇ ಬಲಿ ತೆಗೆದು ಕೊಂಡುಬಿಟ್ಟಳು. ಇನ್ನೂ ಏನೇನನ್ನು ಬಲಿ ತೆಗೆದು ಕೊಳ್ಳಲು ಕಾದಿರುವಳೋ ಹಾಳಾದವಳು. ಇನ್ನೂ ಕಾಲ ಮೀರಿಲ್ಲ. ಈಗಲೂ ಅವಳನ್ನು ಹೊರಗೆ ಹಾಕಿ ಆಗಲಿರಬಹುದಾದ ಅನರ್ಥಗಳನ್ನು ತಡೆಗಟ್ಟು."

ಈಗಲೂ ಬಸವಿಯನ್ನು ಬೀದಿಯಪಾಲು ಮಾಡಲು ಮಲ್ಲನಾಯಕನ ಅಂತರಾತ್ಮ ಒಡಂಬಡಲಿಲ್ಲ.

ಏಕೋ ಏನೋ ಬಸವಿಯ ಮುಖವನ್ನು ನೋಡು ತ್ತಿರುವಂತೆಲ್ಲಾ ಮಲ್ಲನಾಯಕನ ಹೃದಯ ಹಿಡಿಯಾಗು ತ್ತಿತ್ತು. ಅವಳ ಬಗೆಗೆ ಅಪಾರ ಕರುಣೆ ಮೂಡುತ್ತಿತ್ತು. ಮಿಕ್ಕ ವಿಷಯಗಳೆಲ್ಲಾ ಮರೆತೇಹೋಗುತ್ತಿತ್ತು.

ನ್ನ ಬಗೆಗಿದ್ದ ಆರೋಪಗಳೊಂದೂ ಬಸವಿಗೆ ತಿಳಿ
ಲ್ಲ.

೫

ಸವಿ ಹನ್ನೆರಡನೆಯ ವರ್ಷದ ಮೆಟ್ಟಿಲನ್ನು ಹತ್ತಿ
ಮಲ್ಲನಾಯಕನೂ ತೀರಿಹೋದ. ಅನಾಥಳಾದ
ತಲೆಯ ಮೇಲೆ ಕೈಹೊತ್ತು ಕಣ್ಣೀರು ಕಾರುತ್ತಾ
ಬಿಟ್ಟಳು.

ಬಸವಿ, ಅನಾಥೆಯಾದಳು.........

ಬಸವಿ, ನಿರಾಶ್ರಿತೆಯಾದಳು.........

ಬಸವಿ, ಅಸಹಾಯಕಳಾದಳು ....

ಬಸವಿ, ಏಕಾಕಿನಿಯಾದಳು.........

ಂಡು ! ಸಾಕಿ ಬೆಳಸಿದವರನ್ನು ಕಳೆದುಕೊಂಡ
ರಾಧಿ; ಬಸವಿಗೆ ಯಾರೂ ಆಶ್ರಯ ಆಸರೆಗಳನ್ನು
ಹೋದರು.

ಎಲ್ಲರ ದೃಷ್ಟಿಯಲ್ಲೂ ಬಸವಿ, ಕೆಟ್ಟನಕ್ಷತ್ರದವಳು. ದಾರಿದ್ರ ಕಂಕಣಳು. ಹೊಕ್ಕ ಮನೆಯನ್ನೇ ನುಂಗಿ ನೀರು ಕುಡಿದವಳು. ಅವಳು ಬರುವ ಮನೆಗೆ ಏಳಿಗೆಯೇ ಇಲ್ಲ.

—ಎಂತಲೇ ಬಸವಿ ಬೀದಿಗೆ ಬಿದ್ದಳು.

ಅವಳಿಗೆ ಎಲ್ಲಿಗೆ ಹೋಗಲೂ ತಾವಿಲ್ಲ. ಎಲ್ಲಿರಲೂ ಆಶ್ರಯವಿಲ್ಲ. ಯಾರ ಆಸರೆಯೂ ಇಲ್ಲ

—ಯಾರಿಗೂ ಬೇಡವಾದಳು, ಬಸವಿ.

× × × ×

ಬಸವಿಗೆ ಆಹಾರಕ್ಕೆ ಕ್ಷಾಮವಿತ್ತು. ಆಸರೆಗೆ ಕೊರತೆಯಿತ್ತು. ಆಶ್ರಯಕ್ಕೆ ದಾರಿದ್ರ್ಯವಿತ್ತು.

ಆದರೆ—

ಅವಳಿಗೆ ರೂಪದ ದಾರಿದ್ರ್ಯವಿರಲಿಲ್ಲ.

ಬಡತನದ ಬೇಗೆಯಿಂದ ನರಳುತ್ತಿದ್ದರೂ, ನಿರಾಶ್ರಿತಳಾಗಿ ಕಳವಳಿಸುತ್ತಿದ್ದರೂ ಹನ್ನೆರಡು ವಯಸ್ಸಿನ ಬಸವಿ ರತಿಯಂತೆ ಮಿರುಗುತ್ತಿದ್ದಳು.

—ಆಗ ಬಸವಿಯ ಭಾಗದ ಸೌಭಾಗ್ಯವೆಂದರೆ- ಅವಳ ರೂಪು.

೬

ಬಸವಿ, ಬೀದಿಗೆ ಬಿದ್ದವಳು.

ಎಲ್ಲಿಯೋ ಬೇಡಿ ತಿನ್ನುವಳು. ದೈವದತ್ತವಾಗಿದ್ದ ಗಂಗಾಧರೇಶ್ವರ ದೇವಸ್ಥಾನದ ಕೈಸಾಲೆಯಲ್ಲಿ ಮಲಗುವಳು. ಅಲ್ಲಿ ತಂಗಾಳಿ ಮೈ ಕೊರೆದರೂ ಕೂಗಿಕೊಳ್ಳುವಂತಿಲ್ಲ; ಮಳೆ ಸುರಿದು ತನ್ನ ಮೈ ತೋಯಿಸಿದರೂ ಯಾರಿಗೂ ಹೇಳಿಕೊಳ್ಳುವಂತಿಲ್ಲ. ಚಳಿಯಾದರೂ, ಹಚ್ಚಡವನ್ನು ಯಾರಿಂದಲೂ ತರುವಂತಿಲ್ಲ.

ಗಂಗಾಧರೇಶ್ವರನ ಕೈಸಾಲೆಯಲ್ಲಿ ಬಸವಿ ಜೀವಂತಳಾಗಿ ನರಳುತ್ತಿದ್ದರೆ, ಕೈಸಾಲೆಯ ಪಕ್ಕದಲ್ಲಿ ಮಹಾದೇವಿ ಕಲ್ಲಾಗಿ ನರಳುತ್ತಿದ್ದಳು.

ಕೈಸಾಲೆಯಲ್ಲಿ ಮಲಗಿಯೋ, ಕುಳಿತುಕೊಂಡೋ ಬಸವಿ ಮಹಾದೇವಿಯ ಕಲ್ಲನ್ನು ನೋಡುತ್ತಿದ್ದಳು. ಅದು ಅವಳಿಗೆ ಏನೇನೋ, ಸಂದೇಶವನ್ನು ನೀಡುತ್ತಿತ್ತು.

ಆದರೆ ಆಗ ಆದು ಬಸವಿಗೆ ಅಸ್ಪಷ್ಟವಾಗಿತ್ತು.

× × × ×

"ಮಹಾದೇವಿ ಸತಿಕಲ್ಲು" ಸಾರುತ್ತಿದ್ದ ಸಂದೇಶ ಈಗ ಬಸವಿಗೆ ಸುಸ್ಪಷ್ಟವಾಗಿ ಕೇಳುತ್ತಿತ್ತು.

—ಬಸವಿಯೀಗ ತನ್ನ ಹದಿನೆಂಟರ ಹರಯದ ನಡೆಯಲ್ಲಿದ್ದಳು!

ಮಹಾದೇವಿಯ ಕಲ್ಲು ಸಾರುತ್ತಿದ್ದ ಸಂದೇಶವನ್ನು ಕೇಳಿ ಬಸವಿ ಹುಬ್ಬುಗಂಟು ಹಾಕುವಳು; ಹಲ್ಲು ಕಡಿಯುವಳು.

"ಅಕ್ಕಾ ನಿನಗೆ ಬುದ್ಧಿ ಇಲ್ಲ. ಹೆಣ್ಣಿಗೆ ಶೀಲವೇ ಪ್ರಾಧಾನ್ಯವಾದುದು. ಶೀಲ ಕಳೆದುಕೊಂಡ ನಾರಿ ಇದ್ದರೂ ಒಂದೆ, ಸತ್ತರೂ ಒಂದೆ"

—ಎಂದು ಬಸವಿ, ಮಹಾದೇವಿಗೆ ಹೇಳುತ್ತಿದ್ದಳು.

ಬಸವಿ ತನ್ನ ತುಂಬಿದ ದೇಹವನ್ನು ವಿರುದ್ಧಲಿಂಗದ ಧಾಳಿ ನಡೆಯದಿರಲಿ ಎಂದು ಗಂಗಾಧರೇಶ್ವರನಿಗೆ ಕೈ ಜೋಡಿಸಿ ಪ್ರಾರ್ಥಿಸಿಕೊಳ್ಳುವಳು.

೭

"ಊರ ಬಸವಿ"

—ನಾಯಕಪುರದ ಜನತೆ ಅನಾಥೆ ಬಸವಿಗೆ ಕೊಟ್ಟಿದ್ದ
ಸರಿದು.

ಜನ ಅವಳಿಗೆ ಏನೋ ಹೆಸರಿಟ್ಟಿದ್ದರೂ, ಬಸವಿ
ಾತ್ರ ಆತ್ಮಸಾಕ್ಷಿಯಾಗಿ ಪರಿಶುದ್ಧಳಾಗಿದ್ದಳು.

ಬೀದಿಯಲ್ಲಿ ಬಿದ್ದಿದ್ದ ಬಸವಿಯ ದೇಹದ ಸೌಂದರ್ಯ
ನ್ನು ಚಪ್ಪರಿಸಲು ಬಹುಮಂದಿ ಯತ್ನಿಸಿ ಅಪಮಾನಿತ
ಾಗಿದ್ದರು. ಬಸವಿಯ ದೇಹ ಊರ ಜನಕ್ಕೆ ಗಗನ
ಸ.ಮವಾಗಿತ್ತು; ನಕ್ಷತ್ರಮಾಲೆಯಾಗಿತ್ತು; ಗಾಳಿಗೋ
ರವಾಗಿತ್ತು.

—ಆದರೂ ಊರಿನ ಜನ ಅವಳನ್ನು ಕರೆಯುತ್ತಿ
ದು—

"ಊರ ಬಸವಿ"

—ಎಂದು.

ಅಸಹಾಯಕಳಾಗಿದ್ದರೂ ಬಸವಿಗೆ ತನ್ನ ಶೀಲವನ್ನು ಕಾಪಾಡಿಕೊಳ್ಳಲು ಕಷ್ಟವಾಗಿರಲಿಲ್ಲ ತನ್ನ ಶೀಲ ಭಂಗದ ಯತ್ನದ ಸೂಚನೆ ಕಂಡುಬಂದೊಡನೆಯೇ, ಬಸವಿ ಭೈರವಿಯಾಗುತ್ತಿದ್ದಳು.

ಭೈರವಿಗೆ ಜನ ಹೆದರಿ, ಹಿಂತಿರುಗುತ್ತಿದ್ದರು.

ಬೀದಿಯ ಭಯಾನಕ ಬಾಳನ್ನು ಸಾಕುಮಾಡಿಕೊಂಡು, ನಾಲ್ಕುಗೋಡೆಯ ನಡುವೆ ಸಭ್ಯವಾಗಿ ಬಾಳನ್ನು ಸಾಗಿಸಿಕೊಳ್ಳಲು ಬಯಸಿದ ಬಸವಿ, ಪಾಳೆಯಗಾರ ರಂಗನಾಯಕನನ್ನು ಕಂಡು. ತನ್ನ ಅಳಲನ್ನು ಅವನಲ್ಲಿ ತೋಡಿಕೊಂಡು, ಭವನದಲ್ಲಿ ತನಗೆ ಊಳಿಗದ ಕೆಲಸವನ್ನು ದಯಪಾಲಿಸಬೇಕೆಂದು ಅರಿಕೆ ಮಾಡಿಕೊಂಡಿದ್ದಳು.

ರಂಗನಾಯಕ, 'ಊರ ಬಸವಿ'ಯ ಅರಿಕೆಯನ್ನು ನಿರಾಕರಿಸಿ ಕಳುಹಿಸಿದ್ದ.

ತಾನು ಬೀದಿಯ ನಾಯಾಗಿಯೇ, ಬಾಳನ್ನು ಮುಗಿಸಬೇಕೆಂದು ತನ್ನ ಲಲಾಟ ಲಿಖಿತವಿದೆಯೇನೋ ಎಂದು

ಕೊಂಡ ಬಸವಿ ಮಮ್ಮಲ ಮರುಗಿದಳು.

—ಬಸವಿಯದು,

ಬೇಡದ ಬದುಕಾಯಿತು. ಕಣ್ಣೀರ ಜೀವನವಾಯ್ತು. ನೋವಿನ ಜೀವಿತವಾಯ್ತು. ನಿಕೃಷ್ಟದ ಜಾಯಮಾನವಾಯ್ತು.

ಅ

ಇಪ್ಪತ್ತು ವರ್ಷದ ತುಂಬು ಜವ್ವನದ ಸೊಬಗನ್ನು ದೂರದಿಂದಲೇ ನೋಡಿ, ಜನ ಚಪ್ಪರಿಸಿಕೊಳ್ಳುತ್ತಿದ್ದರು.

ಎಲ್ಲರಿಗೂ ಬಸವಿ ದುರ್ಲಭ. ಯಾರ ಯಾವ ಬಗೆಯ ದಬ್ಬಾಳಿಕೆಯೂ ಅವಳ ಬಳಿ ಸಾಗದು.

ಇದಕ್ಕೆ ಅಗತ್ಯವಾದ ಸಂಯಮ, ದಮನ ಶಕ್ತಿಗಳು ಬಸವಿಗೆ ಇತ್ತು.

ಬಸವಿ ದೇಹವನ್ನು ದಂಡಿಸುತ್ತಿದ್ದಳು. ಕರಣಗಳನ್ನು ಖಂಡಿಸುತ್ತಿದ್ದಳು ತನ್ನ ಇಂದ್ರಿಯಗಳ ಮೇಲೆ ಧಾಳಿ ನಡೆಸಿ ಜಯಪ್ರದಳಾಗಿದ್ದಳು.

ವಿಷಯಾಸಕ್ತಿಯು ಪೀಡನೆ ಅವಳಿಂದ ಸಹಸ್ರ ವ್ಯ[illegible] ದೂರದಲ್ಲಿತ್ತು.

ನಾಯಕಪುರ ಜನರ ದೃಷ್ಟಿಯು "ಊರಬಸವಿ" ಕೆಸರ ಕಮಲವಾಗಿದ್ದಳು.

ನಿಸ್ಸಹಾಯಕ ನಾರಿ, ತನ್ನ ಶೀಲವನ್ನು ಕಾಪಾಡಿ ಕೊಂಡು ಬರುತ್ತಿದ್ದ ಹೆಮ್ಮೆಯ ಸುದ್ದಿ ಪಾಳೆಯಗಾರ ರಂಗನಾಯಕನ ಕಿವಿಯನ್ನು ಸೋಂಕಿತ್ತು.

"ಊರಬಸವಿ ನಮ್ಮ ಪ್ರಾಂತ್ಯಕ್ಕೆ ಒಂದು ರತ್ನ. ಅವಳ ಇರುವಿಕೆ ನಮಗೊಂದು ಹೆಮ್ಮೆಯ ಸಂಗತಿ"

—ಎಂದುಕೊಂಡ ಪಾಳೆಯಗಾರ.

—ಆಗ ರಂಗನಾಯಕನಿಗೆ ಬಸವಿಯ ಬೆಲೆ ಗೊತ್ತಾ ಗಿತ್ತು.

ತನ್ನ ಮಹಲಿಗೆ ಬಂದು, ಊಳಿಗದವರ ಮುಖ್ಯಸ್ಥೆ ಯಾಗಿರಬೇಕೆಂದು ನಾಯಕ ಬಸವಿಗೆ ಕರೆಕಳುಹಿದ.

ಆಗ ಅವಳಾಗಿಯೇ ಹೋಗಿ ಸಾಧಾರಣವಾದ ಊಳಿ ಗದ ಉದ್ಯೋಗವನ್ನು ಕೇಳಿದರೂ ಇಲ್ಲ. ಈಗ ಅವ ಕಾಶವನ್ನು ತಾನೇ ತಾನಾಗಿ ನಾಯಕ ಕಳುಹಿಸಿದ್ದಾನೆ!

ಬಸವಿ ನಾಯಕನ ಕರೆಯನ್ನು ನಿರಾಕರಿಸಿದಳು. ನಾಯಕನ ಭವನ ತನಗೆ ತೃಣಸಮಾನವೆಂದಳು.

ಇದರಿಂದ ರಂಗನಾಯಕ ಉದ್ರಿಕ್ತನಾಗಲಿಲ್ಲ. ಬಸ

ವಿಯ ಮನೋಸ್ಥೈರ್ಯ, ದಿಟ್ಟತನ, ಸ್ವಾಭಿಮಾನಗಳಿಗೆ ತಲೆತೂಗಿದ.

ಬಸವಿಯ ಸೌಶೀಲ್ಯ, ಸದ್ಗುಣಗಳಿಗೆ ರಂಗನಾಯಕ, ಅವಳಿಗೊಂದು ಪ್ರತ್ಯೇಕವಾದ ಮನೆಯನ್ನು ಊರಿನೊಳಗೇ ಕಟ್ಟಿಸಿಕೊಟ್ಟು, ಅವಳಿಗೆ ಬೇಕಾಗುವ ಆಹಾರ ಸಾಮಗ್ರಿಗಳನ್ನು ಬಳುವಳಿಯಾಗಿ ಕೊಡಲಾರಂಭಿಸಿದ.

—ಇದರಿಂದ ಬಸವಿ ಸ್ವತಂತ್ರೆಯಾದಳು; ನಿರ್ಭಯಳಾದಳು.

ಅನ್ನ, ಅರಿವೆ, ಆಶ್ರಯಗಳ ಕೊರತೆಯಿಂದ ಪಾರಾದ ಬಸವಿ, ತನ್ನ ಗಮನವನ್ನು ವೈರಾಗ್ಯದತ್ತ ತಿರುಗಿಸಿಕೊಂಡಳು. ಆಜೀವಪರ್ಯಂತ ಅವಿವಾಹಿತಳಾಗಿಯೇ ಇರಬೇಕೆಂದು ಸಂಕಲ್ಪಿಸಿದಳು. ಗಂಗಾಧರೇಶ್ವರನ ಪರಮ ಭಕ್ತೆಯಾದಳು.

ಬಸವಿಯ ಮೇಲೆ, ಊರಿನವರ ದೃಷ್ಟಿಕೋನವೂ ಬದಲಾಗಿತ್ತು. ಅವಳಲ್ಲಿ ಅವರಿಗೆ ಮಾನ್ಯತೆ ಪೂಜ್ಯತೆಗಳಂಕುರಿಸಿದ್ದುವು.

—ಬಸವಿ ರಾಜಾಶ್ರಯದ ಜೀವಿಯಾಗಿ ಸತ್ಕಾಲ ಕ್ಷೇಪ ಮಾಡಲಾರಂಭಿಸಿದಳು. ಜೀವನದ ಸವಿ ಮಧುರತೆಗಳು ಅವಳಿಗೆ ಅಸಹ್ಯವಾಗಿತ್ತು. ಮನಸ್ಸು ವೇದಾಂತಾಭಿಮುಖವಾಗಿತ್ತು. ಜೀವನ ಕೇವಲ ನಾಲ್ಕು ದಿನಗಳ ನಶ್ವರ ನಾಟಕವಾಗಿ ಬಸವಿಗೆ ತೋರುತ್ತಿತ್ತು.

ದಿನದ ಬಹು ವೇಳೆಯನ್ನೆಲ್ಲಾ ಗಂಗಾಧರೇಶ್ವರನ ಗರ್ಭ ಗುಡಿಯಲ್ಲೇ ಕುಳಿತು ಕಾಲ ಕಳೆಯುತ್ತಿದ್ದ ಬಸವಿ, ಮೂಡಿಬರುತ್ತಿದ್ದ ಸಮಯ ಸ್ಫೂರ್ತಿಯಿಂದ ಗಂಗಾಧರೇಶ್ವರನ ಮೇಲೆ ಭವ್ಯವಾಗಿ ವಚನಗಳನ್ನು ನಿರ್ಮಿಸಿ ಹಾಡುತ್ತಿದ್ದಳು.

ಯೌವನ ವಿರಾಗಿಣಿ ಊರಬಸವಿಯ ವಚನ ಊರಿನಲ್ಲೆಲ್ಲಾ ಜನಪ್ರಿಯವಾಯ್ತು. ಗೃಹಿಣಿಯರ ಅನುದಿನದ ಶಿವಪೂಜೆಯ ಗೀತವಾಯ್ತು. ರಾಗಪ್ರಿಯರಿಗೆ ಸುಶ್ರಾವ್ಯ ಸಂಗೀತವಾಯ್ತು. ಬಸವಿಯ ವಚನ ಭಕ್ತವೃಂದದ ಬಾಯಲ್ಲೆಲ್ಲಾ ಓಡಾಡತೊಡಗುವಂತಾಯ್ತು.

ಬಸವಿ ಗಂಗಾಧರೇಶ್ವರನ ಗುಡಿಯ ಕೈಸಾಲೆಯಲ್ಲಿ

ಕುಳಿತು ಸಾರ್ವತ್ರಿಕವಾಗಿ ಸಂಜೆಯ ವೇಳೆ ಸ್ವನಿರ್ಮಿತ ವಚನಗಳನ್ನು ಹಾಡುವಳು. ಜನ ವಿಪರೀತವಾಗಿ ಸೇರುವುದು.

ಅವಳ ವಚನ ಗಾಯನ ನಾಯಕಪುರದ ಒಂದು ವೈಶಿಷ್ಟ್ಯವಾಗಿತ್ತು.

ವಿಶೇಷ ಗೌರವ ಆಹ್ವಾನದಿಂದ ರಂಗನಾಯಕ ಬಸವಿಯನ್ನು ತನ್ನ ಮಹಲಿಗೆ ಕರೆಯಿಸಿಕೊಂಡು ಅವಳ ವಚನಾಮೃತವನ್ನು ಸವಿದು ಸಂತಸಪಡುತ್ತಿದ್ದ.

ಬಸವಿ—

ಅಂದು ಅನಾಥೆ; ಇಂದು ಸರ್ವಜನ ಮಾನ್ಯೆ.

ಅಂದು ನಿರಾಶ್ರಿತೆ; ಇಂದು ರಾಜಾಶ್ರಯ.

ಅಂದು ಆಸರೆ ಹೀನೆ; ಇಂದು ಗೌರವಾಹ್ವಾನಿತೆ.

೯

ಸೆರೆಮನೆಯಲ್ಲಿ ರಂಗನಾಯಕ, ಕೈಹಿಸುಕಿಗೊಳ್ಳುತ್ತ ಶತಪಥ ತುಳಿಯುತ್ತಿದ್ದ.

ನಾಯಕಪುರದ ಪಾಳೆಯಪಟ್ಟು ರಾಹುಗ್ರಸ್ತವಾಗಿತ್ತು. ರಾಜಕೀಯದ ಆಕಾಶಕ್ಕೆ ಕೆಂಪಡರಿತ್ತು.

ಪಿರಿಯಾಪಟ್ಟಣದ ಕಡೆಯ ಲೂಟಿಗಾರನೊಬ್ಬ, ತನ್ನ ಸಹಸ್ರ ಸೈನಿಕರೊಂದಿಗೆ ನಾಯಕಪುರದ ರಂಗನಾಯಕನ ಮಹಲಿಗೆ ನುಗ್ಗಿ, ಬೆಲೆಬಾಳುವ ನಗ ನಾಣ್ಯಗಳನ್ನೆಲ್ಲಾ ತನ್ನ ಕೈವಶ ಮಾಡಿಕೊಂಡು, ರಂಗನಾಯಕನನ್ನು ಸೆರೆಗೆ ಸೇರಿಸಿದ್ದ.

ನಾಯಕಪುರದ ಪ್ರಜಾಸ್ತೋಮ ದಿಕ್ಕೆಟ್ಟು ಕುಳಿತ್ತು!

ಲೂಟಿಗಾರನ ಮುಂದೆ ನಾಯಕನ ಸೈನ್ಯ ತಲೆಯೆತ್ತದಷ್ಟು ಅಬಲವಾಗಿತ್ತು.

ಮಹಲಿನ ಲೂಟಿಯಿಂದ ತೃಪ್ತಿಪಡೆಯದ ಲೂಟಿಗಾರ ಊರನ್ನೇ ಲೂಟಿ ಮಾಡಲು ಹವಣಿಸುತ್ತಿದ್ದ. ಊರಿನ ಜನ ಊರು ಬಿಟ್ಟು ಹೊರಟುಹೋಗಲು ಸಿದ್ಧರಾಗುತ್ತಿದ್ದರು.

—ರಂಗನಾಯಕ ಸೆರೆಮನೆಯಲ್ಲೇ ಇದ್ದ.

ಲೂಟಿಗಾರ ನಾಯಕಪುರಕ್ಕೆ ಬಂದಿಳಿದು ನಾಲ್ಕು ದಿನಗಳ ಮೇಲಾಗಿತ್ತು. ಊರಿನ ಲೂಟಿಯ ವಿಷಯವನ್ನು ಸ್ವಲ್ಪ ಮುಂದಕ್ಕೆ ಹಾಕಿ,ರಂಗನಾಯಕನ ಮಹಲಿನಲ್ಲಿ ಕಾಲ ಕಳೆಯುತ್ತಿದ್ದ.

ಬಸವಿ, ತಮ್ಮ ನಾಡಿನ ಗ್ರಹಣ ಪರಿಹಾರವಾಗುವಂತೆ ಗಂಗಾಧರೇಶ್ವರನಿಗೆ ಮೊರೆಯಿಡುತ್ತಿದ್ದಳು.

ಊರಬಸವಿಯ ಸೌಂದರ್ಯ ವಿಚಾರ ಹೇಗೋ ಲೂಟಿಗಾರನ ಕಿವಿಯನ್ನು ಸೇರಿತ್ತು.

ಲೂಟಿಗಾರ ಬಸವಿಯನ್ನು ನೋಡುವ, ಕೂಡುವ ಆಸಕ್ತಿಯನ್ನು ವಹಿಸಿದ.

ಲೂಟಿಗಾರ ತನ್ನನ್ನು ನೋಡಲಪೇಕ್ಷಿಸಿರುವ ಸಂಗತಿ ಬಸವಿಗೆ ತಿಳಿದರೂ ಭಯಗೊಳ್ಳಲಿಲ್ಲ.

ಊಟಿಗಾರ ಬಸವಿಯನ್ನು ಮಹಲಿಗೆ ಕರೆತರುವಂತೆ ಸೇವಕರಿಗೆ ಆಜ್ಞಾಪಿಸಿ ಕಳುಹಿಸಿದ. ಬಸವಿ ಊಟಿಗಾರನ ಆಜ್ಞೆಯನ್ನು ನಿರಾಕರಿಸಿದಳು.

ಇದರಿಂದ ಊಟಿಗಾರ ಕುಪಿತನಾಗಲಿಲ್ಲ. ಈಗಲೇ ಬಸವಿಯನ್ನು ದಂಡಿಸಿದರೆ, ನಾಳೆ ಆಕೆ ತನ್ನ ವಶಳಾಗಲಾರಳೆಂದು ಪರಿಸ್ಥಿತಿಯನ್ನು ಹದಗೆಡಿಸಲಿಚ್ಛಿಸದೆ, ತಾನೇ ಅವಳಲ್ಲಿಗೆ ಹೋಗಿ ನೋಡಲು ಸಿದ್ಧನಾದ.

ಊಟಿಗಾರ ತನ್ನನ್ನು ನೋಡಬರುವನೆಂಬ ಸಂಗತಿ ತಿಳಿದರೂ ಬಸವಿ ತಲೆತಪ್ಪಿಸಿಕೊಳ್ಳಲಿಲ್ಲ. ಆ ವಿಷಯವನ್ನು ಕೇಳಿ ಲಘುವಾಗಿ ನಕ್ಕುಬಿಟ್ಟಳು.

ಆ ಸಂಜೆ ಊಟಿಗಾರ ಬಸವಿಯನ್ನು ನೋಡಲು ಗಂಗಾಧರೇಶ್ವರದ ದೇವಸ್ಥಾನಕ್ಕೆ ಬಂದ. ಮುನ್ಸೂಚನೆಯಂತೆ ದೇಗುಲದ ಬಳಿ ಜನಸಂದಣಿಯನ್ನು ನಿರ್ಬಂಧಿಸಲಾಗಿತ್ತು.

ಬಸವಿ, ತನ್ನ ದಿನಚರಿಯಂತೆ ಆ ದಿನವೂ ದೇಗುಲದ ಕೈಸಾಲೆಯಲ್ಲಿ ವಚನವನ್ನು ಹಾಡುತ್ತಾ ಕುಳಿತಿದ್ದಳು.

ಹಾಡುತ್ತಿದ್ದ ಬಸವಿ ತನ್ನ ಮುಂದೆ ಪ್ರಚಂಡ

ಲೂಟಿಗಾರ ಬಂದು ಮೌನವಾಗಿ ತನ್ನನ್ನೇ ನೋಡುತ್ತಾ ನಿಂತಿದ್ದರೂ, ಅವನನ್ನು ಗಮನಿಸಲೂ ಇಲ್ಲ. ಲಕ್ಷಿಸಲೂ ಇಲ್ಲ.

—ಲೂಟಿಗಾರ ನೋಡುತ್ತಲೇ ನಿಂತಿದ್ದ.

—ಬಸವಿ ಹಾಡುತ್ತಲೇ ಇದ್ದಳು.

ಎಷ್ಟೋ ಹೊತ್ತು ಕಳೆದುಹೋಗಿದ್ದರೂ, ಲೂಟಗಾರ ನೋಡುವುದನ್ನು ಬಿಟ್ಟರಲಿಲ್ಲ. ಬಸವಿ ಹಾಡುವುದನ್ನು ನಿಲ್ಲಿಸಿರಲಿಲ್ಲ.

—ಲೂಟಿಗಾರ ನೋಡಿ ಸಾಕಾದ.

—ಬಸವಿಗೆ ಹಾಡುವಿಕೆ ಸಾಕಾಗಿರಲಿಲ್ಲ.

"ಓ ಸುಂದರಿ, ನೀನು ಅಂಧಳೆ?"

—ಲೂಟಿಗಾರ ಸ್ವಲ್ಪ ಬಿರುಸಾಗಿಯೇ ಕೇಳಿದ.

ಬಸವಿ ಅವನ ಧ್ವನಿಯಿಂದಾಗಿ, ತನ್ನ ಗಾನಸಮಾಧಿಯಿಂದ ಎಚ್ಚೆತ್ತಳು.

"ನಾನು ಅಂಧಳಲ್ಲ; ಆದರೆ ನೀನು ಕಿವುಡ"

—ಬಸವಿ ನಿರ್ದಾಕ್ಷಿಣ್ಯವಾಗಿ ಉತ್ತರಿಸಿದಳು.

ಬಸವಿಯ ನಿಷ್ಠುರ ನುಡಿಯಿಂದ ಲೂಟಿಗಾರನ

ಸ್ವಾಭಿಮಾನ ಕೆರಳಿ ನಿಂತಿತು.

"ಯಾರೊಡನೆ ಮಾತನಾಡುತ್ತಿರುವೆ ಎಂಬುದಿವು ನಿನಗಿರಲಿ ಬಾಲೆ"

—ಲೂಟಿಗಾರ ಭಯದ ಬಲೆಯನ್ನೆಸೆದ.

"ಸ್ತ್ರೀಯ ಶೀಲವನ್ನು ಕೆಡಿಸಲೆತ್ನಿಸುವುದೂ. ಸಿಂಹದೊಂದಿಗೆ ಸೆಣಸುವುದೂ ಸಮವೆಂದು ತಿಳಿ, ಧೂರ್ತ"

—ಅವನ ಭಯದ ಬಲೆಗೆ ಬೇಟೆಯಾಗದೆ ಬಸವಿ ನುಡಿಕಾರಿದಳು.

"ಸಂಪದದ ಮುಂದೆ, ಶೀಲ ತೃಣವಾದುದು"

"ಇದು ನಿನ್ನ ಕಾಮುಕತ್ವದ ಪ್ರದರ್ಶನ"

"ಅಲ್ಲ. ನನ್ನ ರಸಿಕತೆಯ ಹೆಗ್ಗುರುತು"

"ಇಲ್ಲ. ನಿನ್ನ ಪಶುತನದ ಗುರುತು"

"ನನಗೆ ಮಾತು ಬೇಕಾಗಿಲ್ಲ"

"ಹಾಗಾದರೆ ನನ್ನಲ್ಲಿ ನೀನು ಬೇಡಲು ಬಂದಿರುವುದೇನು?"

"ನನಗೆ ನೀನು ಬೇಕು"

"ಆದರೆ ನನಗೆ ನೀನು ಬೇಡ"

"ನಾನು ಪ್ರಬಲ; ನೀನು ಅಬಲೆ"

"ಇದು ಸತ್ಯವಲ್ಲ"

"ಅಂದರೆ ಸತ್ಯಾಸತ್ಯತೆಗಳ ಪರೀಕ್ಷೆಯಾಗಬೇಕೇನು?"

"ಆದರೂ ಬಾಧಕವಿಲ್ಲ; ವಿಜಯಮಾಲಿಕೆ ನನ್ನದು"

"ವಿಜಯಮಾಲೆ ನಿನ್ನದಾಗಬೇಕಾದರೆ, ನಿಮ್ಮ ಪಾಳೆಯಗಾರ, ನಿಮ್ಮ ಊರು ನಾಶವಾಗುವುದು ಖಂಡಿತ"

—ಲೂಟಿಗಾರನ ಶಾಸನದಂತಿದ್ದ ಈ ಮಾತುಗಳನ್ನು ಕೇಳಿ ಬಸವಿ ಒಂದು ಕ್ಷಣ ಮೌನಧರಿಸಿದಳು. ಕೂಡಲೇ ಅವಳಿಗೆ ಮಹಾದೇವಿ ಸತೀಕಲ್ಲಿನ ಘಟನೆ ನೆನಪಿಗೆ ಬಂದಿತು.

"ನಿನ್ನ ಮಾತು ನನಗರ್ಥವಾಗಲಿಲ್ಲ"

—ಬಸವಿ, ಲೂಟಿಗಾರನನ್ನು ಕೇಳಿದಳು.

"ನೀನು ನನ್ನವಳಾಗದಿದ್ದರೆ, ನಿಮ್ಮ ಪಾಳೆಯಗಾರನಾದ ಸೆರೆಯಲ್ಲಿರುವ ರಂಗನಾಯಕ ತನ್ನ ಪ್ರಾಣವನ್ನು ಕಳೆದುಕೊಳ್ಳಬೇಕಾಗುತ್ತದೆ. ಇಡೀ ನಾಯಕಪುರವೇ ನನ್ನಿಂದ ಲೂಟಿಯಾಗುತ್ತದೆ. ಕಣ್ಣಿಗೆ ಕಾಣುವ ಸ್ತ್ರೀ

ಯರೆಲ್ಲಾ ನನ್ನ ಕಾಮಕ್ಕೆ ಬಲಿಯಾಗುತ್ತಾರೆ. ಈ ಅನರ್ಥಗಳೆಲ್ಲದರ ಕಾರಣಕರ್ತೆ ನೀನಾಗುತ್ತೀಯೆ."

—ಈ ಮಾತು ನಿಜಕ್ಕೂ ಬಸವಿಯಲ್ಲಿ ಭಯವನ್ನು ತಂದಿತು. ಇದರಿಂದ ಅವಳ ಮುಖ ಸೊರಗಿತು.

"ನಾನು ನಿನ್ನವಳಾಗುವುದಾದರೆ?"

—ಬಸವಿಯೇ ಈ ಮಾತನ್ನು ಕೇಳಿದಳು ಆದರೆ ಅವಳಿಗೇ ಆ ಮಾತನ್ನು ತಾನು ಆಡಿದಂತೆ ಕಾಣಲಿಲ್ಲ.

ಬಸವಿಯ ಮಾತುಗಳಿಂದ ಲೂಟಿಗಾರನ ಮುಖ ವರಳಿತು.

"ನೀನು ನನ್ನವಳಾಗುವುದಾದರೆ, ಸಂಪದದ ಲಕ್ಷ್ಮಿ ನಿನ್ನ ಪಾದದ ಬಳಿ ಬಿದ್ದಿರುತ್ತಾಳೆ. ನಿನಗೆ ಆಶ್ರಯ ಕೊಟ್ಟಿದ್ದ ಪಾಳೆಯಗಾರನ ಪ್ರಾಣ ಉಳಿದುಕೊಳ್ಳುತ್ತದೆ. ಊರು ಲೂಟಿಯಿಂದ ಪಾರಾಗುತ್ತದೆ."

—ಲೂಟಿಗಾರನಿಂದ ಈ ಮಾತುಗಳು ಸಂತಸದ ಸ್ನಾನ ಮಾಡಿಕೊಂಡು ಬಂದಿತ್ತು.

"ನಾನು ನಿನ್ನವಳಾಗುತ್ತೇನೆ."

—ಬಸವಿ ಹೇಳಿಬಿಟ್ಟಳು.

“ಸುಂದರಿ ನಿನ್ನ ಸೌಂದರ್ಯ ಸಾರ್ಥಕವಾಯಿತು.”

—ಸಂತಸದ ಪರಕಾಷ್ಠೆಯನ್ನು ಮುಟ್ಟಿ ನುಡಿದ, ಲೂಟಿಗಾರ. ಮತ್ತೆ ಅವನೇ ಹೇಳಿದ—

“ನಿನ್ನನ್ನು ಮಹಲಿಗೆ ಕರೆದುಕೊಂಡು ಹೋಗಲು ಮೇನಾ ತರಿಸಲೇ?”

ಬಸವಿ ಹೇಳಿದಳು—

“ಬೇಡ. ನಿನ್ನ ಮಂಚವನ್ನೇರಿ ಮಲಗಲು ನನಗೆ ಮೂರು ದಿನಗಳ ಕಾಲಾವಧಿ ಬೇಕು. ಇದು ನಾನು ನಿನ್ನವಳಾಗಲು ಹಾಕುವ ನಿಬಂಧನೆ. ಸುಂದರಿಗಾಗಿ, ರಸಿಕ ಮೂರುದಿನಗಳು ಕಾಯುವುದು ಕಷ್ಟತರವೇನಲ್ಲ”

ಲೂಟಿಗಾರನೆಂದ—

“ನಿನ್ನ ನಿಬಂಧನೆಗೆ ನಾನು ಒಪ್ಪಿದ್ದೇನೆ. ಆದರೆ ನೀನು ಮಹಲಿಗೇ ಬಂದಿರಬೇಕು. ಇಲ್ಲಿರಕೂಡದು.”

ಬಸವಿ ಮೋಹಕವಾಗಿ ಹೇಳಿದಳು.

“ಸಾಧ್ಯವಿಲ್ಲ. ನಿಮಗೆ ನಿಮ್ಮವಳಾಗುವವಳ ಮೇಲೆ ನಂಬಿಕೆ ಇರದಿದ್ದರೆ, ನಾನೇನು ಮಾಡಲೂ ಸಾಧ್ಯವಿಲ್ಲ. ಆ ಮೂರುದಿನಗಳು ಕಳೆಯುವವರೆಗೂ ನಾನಿಲ್ಲೇ ಇರು

ತ್ತೇನೆ ನೀನು ಈ ಕೂಡಲೇ ರಂಗನಾಯಕನನ್ನು ಸೆರೆಯಿಂದ ತಪ್ಪಿಸಿ, ಅವನನ್ನು ಈ ಊರಿನಿಂದ ಹೊರಗೆ ಕಳುಹಿಸಿಬಿಡಬೇಕು."

ಲೂಟಿಗಾರ ಹೇಳಿದ—

"ನೀನು ಹೇಳಿದ ಹಾಗೆಯೇ ನಡೆಯುತ್ತೇನೆ. ನಾನು ನಿನ್ನಲ್ಲಿ ನಂಬಿಕೆಯನ್ನಿರಿಸಿದ್ದೇನೆ"

ಬಸವಿ ಪ್ರೀತಿಯಿಂದ ಹೇಳಿದಳು—

"ನಾನು ನಿನ್ನ ಪ್ರಿಯೆ."

೧೦

ಲೂಟಿಗಾರ ರಂಗನಾಯಕನನ್ನು ಬಂದೀಖಾದೆಯಿಂದ ಬಿಡುಗಡೆ ಮಾಡಿದ.

ಜೀವವನ್ನುಳಿಸಿಕೊಂಡ ನಾಯಕ ಕೂಡಲೆ ಹೋಗಿ ಪಕ್ಕದ ಪ್ರಾಂತ್ಯದ ಪಾಳೆಯಗಾರನ ಮರೆಹೊಕ್ಕ.

ಬಸವಿಯ ರಹಸ್ಯ ಸೂಚನೆಯಂತೆ ಊರಿನವರೆಲ್ಲಾ ತಮ್ಮ ಅಮೂಲ್ಯವಾದ ಪದಾರ್ಥಗಳನ್ನು ರಾತ್ರಿಯ ವೇಳೆ ನೆಲಮಾಳಿಗೆಯಲ್ಲಿ ಬಚ್ಚಿಟ್ಟರು. ನಾಯಕಪುರದ ಸ್ತ್ರೀ ಸಮುದಾಯವೆಲ್ಲಾ ಗುಪ್ತವಾಗಿ ಹತ್ತಿರದ ಕಾಡಿ ಹೋಗಿ ಅಡಗಿಕೊಂಡಿತು.

§ § § §

ಅದು, ಲೂಟಿಗಾರನಿಗೂ, ಬಸವಿಗೂ ಭೇಟಿಯಾದ ನಾಲ್ಕನೆಯ ದಿನ. ಆ ದಿನ ಬಸವಿ ಲೂಟಿಗಾರನ ವಶವಾಗಿ ಅವನಿಗೆ ತನ್ನ ಮೈ ತೆರಬೇಕಾಗಿತ್ತು.

ಆದರೆ ಆ ದಿನ ಬಸವಿಯೇ ಇರಲಿಲ್ಲ. ಹಿಂದಿನ ರಾತ್ರಿಯೇ ನಾಯಕಪುರದಲ್ಲಿ ಹರಿದು ಹೋಗುತ್ತಿದ್ದ ಹೊಳೆಗೆ ಬಿದ್ದು ಸತ್ತು ಶವವಾಗಿ ಎಲ್ಲಿಗೋ ತೇಲಿ ಹೋಗಿದ್ದಳು.

ಆದರೆ, ಬಸವಿ ಲೂಟಿಗಾರನಿಗೆ ಹೇಳಿ ಬರೆಸಿದ್ದ ಪತ್ರ ಮಾತ್ರ ಅವನ ಕೈಸೇರಿತು.

ಬಸವಿ ಬರೆಸಿದ್ದಳು—

ಕಾಮುಕ ಲೂಟಿಗಾರನೆ,

ಈ ನಮ್ಮ ನಾಯಕಪುರ ವೇಶ್ಯಾವಾಟಿಯಲ್ಲ. ಇಲ್ಲಿನ ಸ್ತ್ರೀ ಸಮುದಾಯವೆಲ್ಲಾ ಶೀಲವಂತರು. ಸೂಳೆಯರಲ್ಲ. ನೀನು ನಿನ್ನ ಮಿತಿಮಿರಿದ ಕಾಮದಾಹದಿಂದ ಅಂಧನಾಗಿ ಮೋಸಹೋದಿ. ನಮ್ಮ ನಾಯಕ ಪಕ್ಕದ ಪಾಳೆಯ

ಗಾರನಿಗೆ ಶರಣಾಗಿದ್ದಾನೆ. ಈ ಸಂಜೆಯೊಳಗೆ ಅವರು ಬಂದು ನಿನ್ನನ್ನು ಸೋಲಿಸಿ, ಶಿಕ್ಷಿಸುತ್ತಾರೆ. ಊರಿನ ಸ್ತ್ರೀಯರುಗೆಲ್ಲಾ ಚದುರಿಹೋಗಿದ್ದಾರೆ. ಈಗ ನೀನೇನೂ ಮಾಡಲಾರೆ. ನಿನಗಿನ್ನು ಬದುಕಿರುವ ಆಸೆ ಇದ್ದರೆ ಈ ಕೂಡಲೇ ನಾಯಕಪುರವನ್ನು ಬಿಟ್ಟು ಹೊರಟುಹೋಗು.

ನಿನ್ನಿಂದ ನಾನು ಆತ್ಮಹತ್ಯೆ ಮಾಡಿಕೊಂಡಿದ್ದೇನೆ. ನಿನಗೆ ಬುದ್ಧಿ ಕಲಿಸಲು ನಾನು ನಿನ್ನವಳಾಗುತ್ತೇನೆ ಎಂದೆ. ಅದರಿಂದಲೇ ನನ್ನ ಶೀಲಕ್ಕೆ ಕಳಂಕ ತಗುಲಿ ತೆಂದು, ಇನ್ನು ಬದುಕಿರಲಾರದೆ ನಾನು ಪ್ರಾಣ ತೊರೆ ದಿದ್ದೇನೆ.

ಹೆಂಗಸಿನಿಂದ ನೀನು ಕಲಿತ ಈ ಪಾಠ ನಿನ್ನ ಮುಂ ದಿನ ಬಾಳಿಗೆ ಕೈದೀವಿಗೆಯಾಗಿರಲಿ.

—ಶೀಲವಂತೆಯಾದ ಬಸವಿ.

× × × ×

ಬಸವಿ ಕಳುಹಿಸಿದ ಪತ್ರವನ್ನು ಓದಿಸಿ ಕೇಳಿದ ಲೂಟಿಗಾರನ ಮೈ ಕಂಪಿಸತೊಡಗಿತು.

ಅದೇ ಮಧ್ಯಾಹ್ನ ಲೂಟಿಗಾರ ತನ್ನ ಸಂಗಡಿಗರಿಗೂ ಹೇಳದೆ ಕೇಳದೆ ಪಲಾಯನ ಮಾಡಿದ. ಅನಾಯಕವಾದ ಲೂಟಿಗಾರನ ಸೈನ್ಯವೂ ಚದುರಿ ಹೋಯಿತು.

ನಾಯಕಪುರ ಸುರಕ್ಷಿತವಾಯಿತು.

ಗಂಗಾಧರೇಶ್ವರ ಗುಡಿಯ ಪಕ್ಕದಲ್ಲಿದ್ದ 'ಮಹಾದೇವಿ ಸತೀಕಲ್ಲಿ'ನ ಪಕ್ಕದಲ್ಲಿಯೇ ಊರಿನ ಜನ ಮತ್ತೊಂದು ಕಲ್ಲು ನೆಟ್ಟು ಅದಕ್ಕೆ 'ಊರ ಬಸವಿ ಕಲ್ಲು' ಎಂದು ನಾಮಕರಣ ಮಾಡಿದರು.

ಅಂದಿನಿಂದ ನಾಯಕ ಪುರಕ್ಕೆ ಬಸವಿಯ ಹೆಸರನ್ನು ಟ್ಟಿದರು.

ನಾಯಕಪುರಕ್ಕೆ, ಬಸವಿ ಹಳ್ಳಿಯೆಂದು ಹೆಸರಾಯಿತು.

ಬಸವಿ ಹಳ್ಳಿಯ ಇತಿಹಾಸವನ್ನು ಪ್ರಜೆಗಳ ಮುಂದೆ ಹೇಳಿ ಇಲ್ಲಿಯುವರೆಗೂ ಆ ಸತೀಕಲ್ಲುಗಳೆರಡರ ಮೇಲಿನ ಪೂಜ್ಯ ಭಾವನೆ ಜನರ ಮನಸ್ಸಿನಲ್ಲಿ ಸ್ಥಿರವಾಗಿನಿಲ್ಲುವಂತೆ ಮಾಡುತ್ತಿರುವವನೆಂದರೆ ಬಸವಿ ಹಳ್ಳಿಯ ಹಿರಿಯನಾದ ಸಿದ್ಧನಾಯಕ

ಮುಗಿದುದು

ಪ್ರಕಾಶಕರ ಮಾತು

ಕನ್ನಡ ಸಾಹಿತ್ಯಕ್ಕೆ ಹಲವು ಬಗೆಯಲ್ಲಿ ಸೇವೆ ಸಲ್ಲಿಸುತ್ತಿರುವ ವೈ. ಸೂ. ಶೇ. ಅವರ ನೂತನ ರಚನೆಯು ಮನೋಹರವಾದ ಎರಡು ಕಥೆಗಳೂ ಸತೀಕಲ್ಲುಗಳ ಹಿನ್ನಲೆಯ ಆಧಾರದ ಮೇಲೆ ರಚಿತವಾಗಿದೆ.

ವೀರಗಲ್ಲುಗಳೂ, ಮಹಾಸತೀಕಲ್ಲುಗಳೂ, ನಮ್ಮ ನಾಡಿನ ಚಿತ್ರದುರ್ಗ, ಕೋಲಾರ, ತುಮಕೂರು ಡಿಸ್ಟ್ರಿಕ್ಟಿನಲ್ಲಿ ಹೇರಳವಾಗಿವೆ. ಆ ಕಲ್ಲುಗಳ ಮೇಲೆ ಕಥೆ ಹೇಳುವವರೂ ಇರುವರು. ಯುದ್ಧದಲ್ಲಿ ಏಕಾಂಗಿಯಾಗಿ ಹೋಗಿ ಪ್ರಾಣವನ್ನರ್ಪಿಸಿದ ಶೂರರಿಗೆ ವೀರಗಲ್ಲುಗಳೂ, ಸಹಗಮನ ಮಾಡಿದ ಸತೀಶಿರೋಮಣಿಯರಿಗೆ ಮಹಾಸತೀಕಲ್ಲುಗಳೂ ಈಗಲೂ ತುಮಕೂರು ಡಿಸ್ಟ್ರಿಕ್ಟಿನ

ಹಲವಾರು ಹಳ್ಳಿಗಳಲ್ಲಿ ಮೂರ್ತಿವೆತ್ತು ನಿಂತಿವೆ. ಚೋಳರು, ತುಮಕೂರು ಪ್ರಾಂತ್ಯದ ಪೂರ್ವ, ಪಶ್ಚಿಮ ದಿಕ್ಕುಗಳಿಂದ ಜೈತ್ರಯಾತ್ರೆ ಹೊರಟು ನೊಳಂಬವಾಡಿ ಉತ್ತರಪ್ರಾಂತ್ಯವಾದ ನಿಡುಗಲ್ಲಿಗೆ ಹೋಗಿ ನೆಲೆಸಿದ್ದಕ್ಕೆ ಚರಿತ್ರೆಯು ಆಧಾರವಾಗಿದೆ. ಆ ವೇಳೆಯಲ್ಲಿ ಅಂದರೆ 1269 ರಲ್ಲಿ ಸುಮಾರು ಏಳುನೂರು ವರ್ಷಗಳ ಹಿಂದೆ ನಡೆದ ಯುದ್ಧವನ್ನು ಅಲ್ಲಿರುವ ವೀರಗಲ್ಲು ಸೂಚಿಸುತ್ತದೆ. ಆ ಕಾಲದಲ್ಲಿ ಎರಡು ಪಂಗಡಗಳವರಿಗೆ ಮನಸ್ತಾಪವೇರ್ಪಟ್ಟು, ದ್ವೇಷ ತೀರಿಸಿಕೊಳ್ಳಲು ಒಂದು ಪಂಗಡದವರು ಇನ್ನೊಂದು ಪಂಗಡದವರ ದನಕರುಗಳನ್ನು ಕದಿಯುತ್ತಿದ್ದರು. ಇಂತಹ ನಡವಳಿಕೆಯು ನಡೆದುದನ್ನೂ, ನಿಡುಗಲ್ ಚೋಳರ ಸಂಗಡ ಯುದ್ಧ ನಡೆದುದನ್ನೂ ಅಲ್ಲಿರುವ ವೀರಗಲ್ಲು ಸೂಚಿಸುತ್ತದೆ.

ಮೇಲೆ ತಿಳಿಸಿದ ವೀರಗಲ್ಲು, ಸ್ಮಾರಕಕಲ್ಲು, ಮಾಸ್ತಿ ಸತಿಕಲ್ಲು ಮುಂತಾದುವುಗಳಿಂದ ಹಿಂದಿನ ಕಾಲದ ರಾಜಕೀಯ ಘಟಿತ ನಡವಳಿಕೆಗಳನ್ನೆಲ್ಲಾ ಕೂಲಂಕುಶವಾಗಿ ತಿಳಿಯಬಹುದು.

ಎರಡು ಮಹಾಸತಿಕಲ್ಲುಗಳನ್ನು ಆಧಾರವಾಗಿಟ್ಟು ಕೊಂಡು ಈ ಲೇಖಕರು ತಮ್ಮ ನೂತನ ಪ್ರಯೋಗ ಶೈಲಿಯಲ್ಲಿ ಸಮಯೋಚಿತ ಸನ್ನಿವೇಶಗಳೊಡನೆ ನಮ್ಮ ಪ್ರಕಾಶನದ ಮೂಲಕ ಓದುಗ ಬಾಂಧವರಿಗೆ ಅರ್ಪಿಸಿರುವರು.

ಮೊದಲನೆಯ ಕಥೆಯಲ್ಲಿ ಮಹಾದೇವಿಯ ಸಾತ್ವಿಕ ಜೀವನ, ದೇಶಕ್ಕಾಗಿ ದೇಹವನ್ನು ಅರ್ಪಿಸಿದ ಮಹಾತ್ಯಾಗ, ರುದ್ರನಾಯಕನ ವಿಷಮಯ ನಡವಳಿಕೆ, ಅಂತ್ಯದ ಪರಿಣಾಮವು ಹೃದಯಂಗಮವಾಗಿ ಬರೆಯಲ್ಪಟ್ಟು ಓದುಗರ ಚಿತ್ತವನ್ನು ಕಲಕುತ್ತದೆ.

ಎರಡನೆಯ ಕಥೆಯಲ್ಲಿ ಬಸವಿಯನ್ನು ಊರಬಸವಿಯೆಂದು ಕರೆದರೂ ಜನರ ಮಾತಿಗೆ ಕಿವಿಗೊಡದೆ ಕಡೆಯವರೆವಿಗೂ ತನ್ನ ಶೀಲವನ್ನು ಕಾಪಾಡಿಕೊಂಡು ಆತ್ಮಹತ್ಯೆ ಮಾಡಿಕೊಳ್ಳುವ ಪ್ರಸಂಗವು ಅಂತಃಕರುಣ ಸಹಾನುಭೂತಿ ಉಂಟುಮಾಡುತ್ತದೆ.

ಈ ನವ್ಯಕಾದಂಬರಿಯನ್ನು ಬರೆದು ನಮ್ಮ ಮಾಲೆಗೆ ಕೊಟ್ಟ ಮೈ. ಸೂ. ಶೇ. ಅವರಿಗೆ ನಮ್ಮ ಪ್ರಕಾಶನವು ಧನ್ಯವಾದಗಳನ್ನರ್ಪಿಸುತ್ತದೆ.

ಈ ಕಾದಂಬರಿಯು ನಮ್ಮ ಪ್ರಕಾಶನದ ನಾಲ್ಕನೆಯ ಕೃತಿ. ಸಹೃದಯರಾದ ಓದುಗರು ಇದುವರೆವಿಗೂ ಬೆಂಬಲವಿತ್ತು ಸಹಕರಿಸಿದಂತೆ ಇನ್ನು ಮುಂದೆಯೂ ಬೆಂಬಲವಿತ್ತು ಸಹಕರಿಸುವರೆಂದು ನಂಬಿರುವೆನು.

ಪ್ರಕಾಶಕರು

ಯುಗಾದಿಹಬ್ಬದ ಕಾಣಿಕೆಯ ಅರ್ಪಣೆ

ಅ ರ ಮ ನೆ ಯ ಚೋ ರ

ಶೃಂಗಾರ ಅತ್ಯದ್ಭುತ ಸಾಹಸಮಯ ಪತ್ತೇದಾರಿ

ಲೇಖಕ:—ಎನ್. ನರಸಿಂಹಯ್ಯ

ಪುರುಷೋತ್ತಮನ ಇಪ್ಪತ್ತೈದನೆಯ ಸಾಹಸದ ರಜತಮಹೋತ್ಸವದ ನೆನಪಿಗಾಗಿ ಅರ್ಪಿಸುವ ಮಹೋನ್ನತ ಕಾಣಿಕೆ.

೩೦೦ ಪುಟಗಳು ಬೆಲೆ ೧-೮-೦

ಪುಸ್ತಕ ಬೇಕಾದವರು ಮುಂಡವಾಗಿ ಎರಡು ರೂಪಾಯಿಗಳನ್ನು ಎಂ. ಒ. ಮಾಡಿದರೆ ರಿಜಿಸ್ಟರ್ಡ್ ಬುಕ್ ಪೋಸ್ಟ್ ಮೂಲಕ ಪ್ರತಿಯನ್ನು ಕಳುಹಿಸಲಾಗುವುದು.

ಪ್ರಕಾಶಕರು

ಟಿ. ನಾರಾಯಣ ಅಯ್ಯಂಗಾರ್

ಬುಕ್ ಸೆಲ್ಲರ್ ಅಂಡ್ ಪಬ್ಲಿಷರ್

ಬಳೇಪೇಟೆ, ಬೆಂಗಳೂರು ೨.

ಪ್ರಕಾಶಕರು

ರಾಜಕಮಲ್ ಪ್ರಕಾಶನ

೧೦೯. ಬಳೇಪೇಟೆ, ಬೆಂಗಳೂರು-೨

ನಮ್ಮ ಪ್ರಕಾಶನದ ಮುಂದಿನ ಪ್ರಕಟಣೆಗಳು

ಎನ್. ನರಸಿಂಹಯ್ಯ ವಿರಚಿತ

ಪತ್ತೇದಾರಿ ಕಾದಂಬರಿಗಳು

ಹುಚ್ಚನ ರಹಸ್ಯ

ವಿಜ್ಞಾನಿಯ ವಿಚಿತ್ರ

ಮಾರ್ವಾಡಿಯ ಮಾಯ

ಏಳು ದಿನಗಳು

ಅಡಗೂಲಜ್ಜಿ

ವಿಚಿತ್ರ ಚೋರ

(ಚೋರಕೇಸರಿಯ ದ್ವಿತೀಯ ಭಾಗ)

ಪ್ರಕಾಶಕರು

ರಾಜಕಮಲ್ ಪ್ರಕಾಶನ

೧೦೯, ಬಳೇಪೇಟೆ ಬೆಂಗಳೂರು ೨

ಮುದ್ರಣ
ಶ್ರೀ ಭಾವನಾ ಪ್ರೆಸ್, ಬೆಂಗಳೂರು ೨

ಮುಂದಿನ ಪ್ರಕಟಣೆ

ಪಂಚರಂಗಿ ಪದ್ಮಿನಿ

ವಿಚಿತ್ರ ವಿನೋದಮಯ, ಸ್ವಾರಸ್ಯ, ಚಮತ್ಕಾರ

ಮನರಂಜನೀಯ ಪತ್ತೇದಾರಿ ಕಾದಂಬರಿ.

ಲೇಖಕ :- ಎಸ್. ನರಸಿಂಹಯ್ಯ.

ಲೆ ೦-೧೦-೦ ಟಪಾಲು ಚಾರ್ಜು ಪ್ರತ್ಯೇಕ

ಪ್ರಕಾಶಕರು :

ರಾಜಕಮಲ್ ಪ್ರಕಾಶನ

೯ ಬಳೇಪೇಟೆ, ಬೆಂಗಳೂರು ೨.